॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

866666

# ಕಲ್ಯಾಣ ಕಿರಣ

ಏಪ್ರಿಲ್-2012

ಬೆಲೆ-20/-



## ಬಸವ ಜಯಂತಿಯ ಶುಭಾಶಯಗಳು



ಪೂಜ್ಯ ಮಾತಾಜಿಯವರಿಗೆ 67ನೆಯ ವರ್ಧಂತಿ ನಿಮಿತ್ತ ಗಣ್ಯರಿಂದ
ಪುಷ್ಪವೃಷ್ಟಿ ಮತ್ತು ಆರತಿ



ಪೂಜ್ಯ ಮಾತಾಜಿಯವರ ಯೋಗಕ್ಷೇಮ ವಿಚಾರಿಸುವ ಪಕ್ಕದ
ಸಿಟಿ ಆಸ್ಪತ್ರೆಯ ನಿರ್ದೇಶಕರಾದ ಡಾ॥ ಭೋಜಮ್ಮ ಅವರಿಗೆ ಸತ್ಕಾರ.




ಸಂಪುಟ-42 | ಬಸವ ಶಕೆ -878 | ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-04 | ಏಪ್ರಿಲ್- 2012 | ವಾರ್ಷಿಕ ಚಂದಾ 200 ರೂ.


## ಸ್ಫೂರ್ತಿ ಗಂಗೋತ್ರಿ

ಶ್ರೀ ಅಕ್ಕಮಹಾದೇವಿ ನೀ ನಮ್ಮ ಮುನ್ನಡೆಸು
ಮಾತಾಯಿ ಸ್ತ್ರೀಕುಲದ ಸ್ಫೂರ್ತಿ ಗಂಗೋತ್ರಿ ॥ ಪ ॥

ಹೆಣ್ಣು ಮಾಯೆಯು ಎಂಬ ಸೊಲ್ಲುಗಳ ಮೆಟ್ಟುತ
ಕಣ್ಣು ತೆರೆಸಿದ ಮಾತೆ ವಿಖ್ಯಾತ ಚರಿತೆ ॥ ಅ.ಪ ॥

ಉಡುತಡಿಯ ಓಂಕಾರ ಝೇಂಕರಿಸಿ ಹರಿಯೆ
ಒಡಲು ತಾ ಬೆಳೆಯಿತು ಲಿಂಗಮ್ಮ ತಾಯಿಯಲಿ
ಒಡಗೂಡಿ ಸುಜ್ಞಾನ ಸಡಗರಿಸಿ ದನಿಯಿತು
ಮೃಡನ ಚೇತನ ನಿನ್ನ ನರತಂತುಗಳ ಮೀಂಟಿ ॥ 1 ॥

ಉಗಮಿಸಿದ ನಿನ್ನೊಡಲು ಸುಳಿದೆಗೆದು ಬೆಳೆಯಿತು
ಪ್ರಗತಿಯಂ ಸಾಧಿಸುತ ದಿನದಿನಕೆ ಸೊಬಗೇರಿ
ಭಕ್ತಿ-ಜ್ಞಾನದ ಸೆಲೆಯು ಹೊಮ್ಮಿ ಹರಿಯುತಿರಲು
ಚೊಕ್ಕ ವೈರಾಗ್ಯದಿಂ ಮಲ್ಲಿಕಾರ್ಜುನಗೊಲಿದೆ ॥ 2 ॥

ಸಂಕಲ್ಪದೊಳು ಮೇರು ಸೌಂದರ್ಯದೊಳು ಹಂಸೆ
ಶಿವ ಭಕ್ತಿಯಲ್ಲಿ ನೀನು ಪ್ರೇಮ ಸಾಮ್ರಾಜ್ಞಿ
ವೈರಾಗ್ಯ ಭಾವದಲ್ಲಿ ಗೌರಿಶಂಕರವಾದೆ
ಹೃದಯ ನಿನ್ನದು ಶಿವಗೆ ಮಾನಸ ಸರೋವರ ॥ 3 ॥

ಅನುಭಾವ ಮಂಟಪದ ಅಮರ ಜ್ಯೋತಿಯು ಆದೆ
ಸ್ವಾನುಭವ ಜೇನನ್ನು ವಚನ ರೂಪದಿ ಇತ್ತೆ
ಚಿಜ್ಯೋತಿ ಬಸವನ ಕಾರುಣ್ಯ ಸುತೆಯಾದೆ
ಬಸವ ಧರ್ಮದ ಕೀರ್ತಿ ದುಂದುಭಿಯ ಮೊಳಗಿದೆ ॥ 4 ॥

\- ಮಾತಾಜಿ

ಅಕ್ಕಮಹಾದೇವಿ ಜಯಂತಿ 6-4-2012ರ ನಿಮಿತ್ತ

## ಸಾರ್ವಜನಿಕ 'ಬಸವ ಜಯಂತಿ'ಗೆ 100 ವರ್ಷದ ಸಂಭ್ರಮ

ಲಿಂಗಾಯತ ಧರ್ಮಬಂಧುಗಳು ಖಾಸಗಿಯಾಗಿ ಅಕ್ಷಯ ತೃತೀಯದಂದು ಬಸವ ಜಯಂತಿಯನ್ನು ಗ್ರಾಮಗಳಲ್ಲಿ ಎತ್ತಿನ ಹಬ್ಬವನ್ನಾಗಿ ಆಚರಿಸುತ್ತಿದ್ದರು. ಧರ್ಮಗುರು ಬಸವಣ್ಣನವರ ಜಯಂತಿಯನ್ನು ಸಾರ್ವಜನಿಕವಾಗಿ ಆಚರಿಸಬೇಕು ಎಂಬ ಆಲೋಚನೆ ಹೊಳೆದುದು ಶರಣ.ಹರ್ಡೇಕರ್ ಮಂಜಪ್ಪನವರಿಗೆ. ಅವರ ಆಲೋಚನೆಗೆ ಕ್ರಿಯಾರೂಪ ದೊರೆತುದು ಮುರುಘಾಮಠದ ಪೂಜ್ಯ ಶ್ರೀ ನಿ.ಪ್ರ.ಮೃತ್ಯುಂಜಯ ಸ್ವಾಮಿಗಳಿಗೆ. ಈ ಇಬ್ಬರು ಮಹಾನುಭಾವರ ಆಲೋಚನೆ ಮತ್ತು ಪ್ರಯತ್ನದಿಂದ 1913ರಲ್ಲಿ ಮೊಟ್ಟ ಮೊದಲ ಸಾರ್ವಜನಿಕ ಬಸವ ಜಯಂತಿ ಆಚರಿಸಲ್ಪಟ್ಟಿತು. ಹೀಗಾಗಿ ಇಲ್ಲಿಗೆ ಒಂದು ನೂರು ವರ್ಷಗಳಾದವು. ಈ ವರ್ಷವನ್ನು ಶತಮಾನೋತ್ಸವ ವರ್ಷವೆಂದು ಭಾವಿಸಿ ಎಲ್ಲರೂ ವೈಭವಯುತವಾಗಿ ಆಚರಿಸಬೇಕೆಂಬ ಸಂಕಲ್ಪ ತೊಡಬೇಕು. 2012-13ನೆಯ ಬಸವ ಜಯಂತಿಯವರೆಗೂ ಪ್ರತಿಯೊಂದು ಊರು, ಗ್ರಾಮಗಳಲ್ಲಿ ಸಹ ಬಸವ ಜಯಂತಿಯನ್ನು ಆಚರಿಸಬೇಕು.

24-4-2012ರಂದು ಬಂದಿರುವ 879ನೆಯ

**ಬಸವ ಜಯಂತಿಯ ಶುಭಾಶಯಗಳು**

## ಕಿರಣಗನ್ನಡಿ


| ಲೇಖನಗಳು ಏಪ್ರಿಲ್, 2012 | ಲೇಖಕರು | ಪುಟ |
|---|---|---|
| 1. ಸ್ಫೂರ್ತಿ ಗಂಗೋತ್ರಿ (ಕವನ) | ಮಾತಾಜಿ | 1 |
| 2. ಶ್ರೀ ಮಾತೆಗೆ ನುಡಿ ನಮನ | ಶಾಂತಮ್ಮ, ಶಿವಮೊಗ್ಗ | 3 |
| 3. ಧಾರವಾಡದಲ್ಲಿ ಏಪ್ರಿಲ್ 28, 29, 30 -ಶರಣೋತ್ಸವ | - | 4-5 |
| 4. ಜನಪದರು ಕಂಡಂತೆ ವಿಶ್ವಗುರು ಬಸವಣ್ಣನವರು | ಮಾತಾಜಿ | 6-10 |
| 5. ಬಸವ ವಚನಾಮೃತ -ಭಾಗ 41 | ಮಾತಾಜಿ | 12-24 |
| 6. ನೆನಪಿನ ಬುತ್ತಿ ಬಿಚ್ಚಿದಾಗ-7 | ಮಾತಾಜಿ | 25-28 |
| 7. ಮೇರುಗಿರಿ ಮಾತಾಜಿ | ಲೀಲಾವತಿ ನಾಡಗೌಡರು | 29-32 |


ಮುಖಪುಟ : ವಿಶ್ವಗುರು ಬಸವಣ್ಣನವರು

2 ಮತ್ತು 4ನೆಯ ಪುಟ ಪೂಜ್ಯ ಮಾತಾಜಿಯವರ ವರ್ಧಂತಿಯ ಚಿತ್ರಗಳು.

### ಏಪ್ರಿಲ್-ಮೇ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆ -ಉತ್ಸವಗಳು

| | | |
|---|---|---|
| 1. | 879ನೆಯ ಬಸವ ಜಯಂತಿ | ಏಪ್ರಿಲ್ 24 |
| 2. | ಧಾರವಾಡದಲ್ಲಿ ಶರಣೋತ್ಸವ | ಏಪ್ರಿಲ್ 28,29,30 |
| 3. | ಕಾಯಕ ದಿನಾಚರಣೆ | ಮೇ 1 |
| 4. | ಬಸವ ಗಂಗೋತ್ರಿಯಲ್ಲಿ ಬಸವೋತ್ಸವ | ಮೇ 27 |

### ಬಸವ ಗಂಗೋತ್ರಿಯಲ್ಲಿ ಬಸವೋತ್ಸವ ಮೇ 27ರಂದು.

ಬೆಂಗಳೂರು-ಮೈಸೂರು ಹೆದ್ದಾರಿ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬರುವ ಬಸವ ಗಂಗೋತ್ರಿಯಲ್ಲಿ ದಿ.27-5-2012ರಂದು ಬಸವೋತ್ಸವವನ್ನು ಏರ್ಪಡಿಸಲಾಗಿದೆ. ಚಿನ್ಮಯಜ್ಞಾನಿ ಚನ್ನಬಸವೇಶ್ವರ ಜ್ಞಾನಪೀಠವನ್ನು ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಆರೋಹಣ ಮಾಡಲಿದ್ದಾರೆ. ಬೆಳಿಗ್ಗೆ 10-30ರಿಂದ ನಡೆಯಲಿರುವ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಲು ಕೋರುತ್ತೇವೆ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, 22923736. Send SMS to 9738028585, 8892912123
Email :- kalyanakirana1970@gmail.com





## ನುಡಿ ನಮನ

ತಾಯೆ ! ಹೇಗೆ ಋಣವ ಸಲ್ಲಿಸುವೆವು ನಾವ್
ನಿಮ್ಮ ಧರ್ಮ ಕೈಂಕರ್ಯಕೆ
ಮಾತೆ ! ಏನನರ್ಪಿಸುವೆವು ನಾವ್
ನಿಮ್ಮ ಮಾತೃತ್ವದ ಕೊಡುಗೆಗೆ
ವಂದಿಸುವೆವು ಸದಾ ಸಿರಿ ಚರಣಕೆ, ಮಾರ್ಚ್ 13 ಕ್ಕೆ

ನೀವೇನೋ ಏರಿದಿರಿ ಎತ್ತರೆತ್ತರಕೆ
ಏರಲಾರೆವು ತಾಯೆ ನಿಮ್ಮೆತ್ತರಕೆ
ಆದರೂ ಮಾಡುವೆವು ಕಿಂಚಿತ್ ಪ್ರಯತ್ನ
ಯಶವಾಗಲೆಂದ್ದರಸಿ ಧರ್ಮ ಪ್ರಚಾರ ಜತನ
ವಂದಿಸುವೆವು ಸದಾ ಸಿರಿ ಚರಣಕೆ, ಮಾರ್ಚ್ 13 ಕ್ಕೆ

ಹುಚ್ಚೆಬ್ಬಿಸಿದಿರಿ ನಮ್ಮಲಿ ಸದಾ ನಿಮ್ಮ ದರ್ಶನ
ಹಚ್ಚ ಹಸುರಾಗಿರಿಸಿದಿರಿ ಮನದಿ ಧರ್ಮದ ವನ
ಜಾಗೃತರಾಗಿರೆಂದು ಸದಾ ಕಿವಿಚುಚ್ಚಿ
ಅರಾಜಕತೆಯು ಆವರಿಸದಿರಲೆಂದು ಮನಬಿಚ್ಚಿ
ವಂದಿಸುವೆವು ಸದಾ ಸಿರಿ ಚರಣಕೆ, ಮಾರ್ಚ್ 13 ಕ್ಕೆ

ಎರಡು ಮಾತಿಲ್ಲ, ದಿವ್ಯಶಕ್ತಿಯೇ ನೀವು
ಅದ್ವಿತೀಯರು ನೀವು, ಅಸಂಖ್ಯಾತ ಅಧ್ಯಾತ್ಮರಲ್ಲಿ
ನಿಮ್ಮಂಡ ನಮ್ಮಕಣ್ಣುಗಳೇ ಧನ್ಯ
ನಿಮ್ನುಡಿ ಕೇಳ್ದ ನಮ್ಮಿಕಿವಿಗಳೇ ಮಾನ್ಯ
ವಂದಿಸುವೆವು ಸದಾ ಸಿರಿ ಚರಣಕೆ, ಮಾರ್ಚ್ 13 ಕ್ಕೆ

ಮಾಡುವೆವು ತಾಯೆ, ಧರ್ಮಕೆ ಷಡಂಗ ದಾಸೋಹ
ನಡೆವೆವು ಮಾತೆ, ಧರ್ಮದ ಋಣತೀರಿಸುವ ದಾಹ
ಗುರುದೇವಾ ಹರಸಿರಿ ಬಸವಾತ್ಮಜೆಯವರಿಗೆ
ಆಯುರಾರೋಗ್ಯ ಶತಮಾನದವರೆಗೆ
ವಂದಿಸುವೆವು ಸದಾ ಸಿರಿ ಚರಣಕೆ, ಮಾರ್ಚ್ 13 ಕ್ಕೆ

ಸ್ವೀಕರಿಸುವಿರೋ ಇಲ್ಲವೋ ಈ ಮುಗ್ಧ ನುಡಿನಮನ
ನಾಲ್ಕು ದಶಕಗಳಿಂದಲೂ ಮಾನಸ ಶಿಷ್ಯ ಸುಮನ
ನಿಮ್ಮ ಪಾದಧೂಳಿಯಾದರೂ ಅದೇ ನಮ್ಮ ಪುಣ್ಯ
ಸವೆಯಲಿ ಬದುಕು ನಿಮ್ಮ ಸೇವೆಗೆ ಅದೇ ಮಾನ್ಯ
ವಂದಿಸುವೆವು ಸದಾ ಸಿರಿ ಚರಣಕೆ, ಮಾರ್ಚ್ 13 ಕ್ಕೆ

ಶರಣೆ. ಶಾಂತಮ್ಮ
ರಾಷ್ಟ್ರೀಯ ಬಸವ ದಳ, ಶಿವಮೊಗ್ಗ



ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್
ಉಳವಿ ರಸ್ತೆ, ಧಾರವಾಡ ಸಂಸ್ಥೆಯಿಂದ ಮೂರನೆಯ



## ಶರಣೋತ್ಸವ ಕಾರ್ಯಕ್ರಮ

### 2012,ಏಪ್ರಿಲ್ 28, 29 ಮತ್ತು 30 ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥ ಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟಳು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ -ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗ್ಗಿದೆ. ಪ್ರತಿ ದೇವ (ಭಾನು)ವಾರ ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ-ಪ್ರವಚನದ ನಂತರ ಪ್ರಸಾದ ದಾಸೋಹವಿರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲನವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ -ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಶ್ರಮವನ್ನು ನಡೆಸಲಾಗುತ್ತಿದೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಜಂಗಮ ಮೂರ್ತಿ ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30 -6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆ ಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಅಶ್ವಯುಜ ಶುದ್ಧ ತ್ರಯೋದಶಿ,





ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಿಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯಾದರೂ 2010ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3 ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. ಶನಿ(ಶರಣ)ವಾರ ದಿ.28ರಂದು ಬೆಳಿಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಕಾರ್ಯಕ್ರಮದ ಉದ್ಘಾಟನೆ, ಸಂಜೆ 4-30ರಿಂದ ಧರ್ಮಚಿಂತನಗೋಷ್ಠಿ. ದಿ. 29 ಭಾನು(ದೇವ)ವಾರದಂದು ಬೆಳಿಗ್ಗೆ 10-30ರಿಂದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ, ಸಾಮೂಹಿಕ ಪ್ರಾರ್ಥನೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ. ಸೋಮ(ಶಿವ) ವಾರ ದಿ.30ರಂದು ಬೆಳಿಗ್ಗೆ ವಿಶೇಷ ಪೂಜೆ. 10-30ರಿಂದ ಪೀಠಾರೋಹಣದ 41ನೆಯ ವಾರ್ಷಿಕೋತ್ಸವ, ನಂತರ ಮೆರವಣಿಗೆ, ಸಮಾರೋಪ ಸಮಾರಂಭ.

3 ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

| | | | |
|---|---|---|---|
| ಮಹಾಪೋಷಕರು | 5000ರೂ | ಹಿತೈಷಿಗಳು | 500ರೂ |
| ಪೋಷಕರು | 3000ರೂ | ವಿಶೇಷ ಸದಸ್ಯರು | 250ರೂ |
| ದಾನಿಗಳು | 1000ರೂ | ಸಾಮಾನ್ಯ ಸದಸ್ಯರು | 150ರೂ |

ದವಸ -ಧಾನ್ಯ, ಬೆಲ್ಲ- ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶುಭಹಾರೈಕೆಗಳೊಡನೆ

ಶರಣ. ಸಿದ್ಧಣ್ಣ ನಟೇಗಲ್
ಅಧ್ಯಕ್ಷರು , ರಾಷ್ಟ್ರೀಯ ಬಸವ ದಳ, ಧಾರವಾಡ

ಶರಣ. ಎಸ್.ಎಲ್.ಗೌಡರು, ಧಾರವಾಡ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಶರಣ. ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ

ಶರಣ. ಶಿವಕುಮಾರ ಕಟಗಿ
ಸಂಘಟಕರು, ರಾಷ್ಟ್ರೀಯ ಬಸವ ದಳ, ಧಾರವಾಡ

ಶರಣ. ದೇವೇಂದ್ರಪ್ಪ ಇಂಗಳಳ್ಳಿ
ಕಾರ್ಯದರ್ಶಿ, ರಾ.ಬ.ದಳ,ಧಾರವಾಡ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ
ಧಾರವಾಡ -580003, ದೂ: 0836-3204121

ಶರಣ. ಬಸವರಾಜ ಲಿಂಗಶೆಟ್ಟರು
ಅಧ್ಯಕ್ಷರು, ಲಿಂ.ಧ.ಮಹಾಸಭಾ, ಹುಬ್ಬಳ್ಳಿ

ಶರಣ. ಕರಿಬಸಪ್ಪ ಕೋರಿಶೆಟ್ಟರು
ಅಧ್ಯಕ್ಷರು, ಯುವ ರಾಷ್ಟ್ರೀಯ ಬಸವ ದಳ
ಮೊ : 9008202994/ 9341334828

ಸ್ವಾಗತ ಸಮಿತಿಯ ಅಧ್ಯಕ್ಷರು
ಶರಣ. ಬಿ.ಜಿ.ಹೊಸಗೌಡರು
ಉಪಾಧ್ಯಕ್ಷರು : ಶರಣ. ಸೂರ್ಯಕಾಂತ ಶೀಲವಂತರು
ಕಾರ್ಯದರ್ಶಿ : ಶರಣ. ಲಿಂಗರಾಜ ಇಂಗಳಳ್ಳಿ

## ಜನಪದರು ಕಂಡಂತೆ ವಿಶ್ವಗುರು ಬಸವಣ್ಣನವರು

ಶಿಷ್ಟ ಸಾಹಿತ್ಯದಷ್ಟೆ ಪ್ರಭಾವಶಾಲಿಯಾಗಿ ಗ್ರಾಮೀಣ ಜನರ, ಶ್ರೀ ಸಾಮಾನ್ಯರ ನಾಲಿಗೆಯಲ್ಲಿ ನರ್ತಿಸುವುದು ಜನಪದ ಸಾಹಿತ್ಯ. ಇದನ್ನು ರಚಿಸಿದವರು ಕೃಷಿಕರು; ಕುಟ್ಟುವವರು, ಬೀಸುವವರು ಮುಂತಾದ ಕಾಯಕ ಜೀವಿಗಳು. ಇವು ಕುಳಿತು ಬರೆದ ಕಾವ್ಯಗಳಲ್ಲ. ಕಾಯಕ ಮಾಡುತ್ತ ಮನದುಂಬಿ ಆಶುಕವಿತ್ವದಿಂದ ರಚನೆಯಾದ ಹಾಡುಗಳು. ದೊಡ್ಡ ದೊಡ್ಡ ಕಾವ್ಯಗಳನ್ನು ರಚಿಸಿದ ಮಹಾನ್ ಕವಿಗಳಾದ ಪಾಲ್ಕುರಿಕೆ ಸೋಮನಾಥ, ಭೀಮಕವಿ, ಹರಿಹರ ಮುಂತಾದವರು ದಾಖಲಿಸದೆ ಇರುವ ಸಂಗತಿಗಳನ್ನು ಮಣ್ಣಿನ ಮಕ್ಕಳಾದ ಜನಪದರು ಸಂಗ್ರಹಿಸಿದ್ದಾರೆ.

ಬಸವ ಹಲೆ ಹಲೆ ಹಂತಿ ಬಸವ ಹಲೆ ಹಲೆ ರಾಶಿ
ಬಸವ ಹುಲುಹುಲುಸು ಕಣಕಣಕೆ ಒಕ್ಕಲಿಗ
ಬಸವನ ನೆನೆಸೋ ಚಣಚಣಕೆ ॥

ಹಂತಿ ಎಂದರೆ ರಾಶಿಯನ್ನು ಮಾಡುವ ಕಾರ್ಯ. ಹೊಲದ ಮಧ್ಯದಲ್ಲಿ ಒಂದು ಭಾಗವನ್ನು ಕಣವನ್ನಾಗಿ, ಗುಡಿಸಿ ಸಾರಿಸಿ ಸಿದ್ಧಮಾಡಿಟ್ಟುಕೊಂಡು ಕೊಯ್ದ ತೆನೆಗಳನ್ನೆಲ್ಲ ಕಣದಲ್ಲಿ ಮೇಟಿಯ ಗೂಟದ ಸುತ್ತಲೂ ಹರಡಿ, ಎತ್ತುಗಳಿಂದ ತುಳಿಸುವ ಕಾರ್ಯಕ್ಕೆ ಹಂತಿಕಟ್ಟುವುದು ಎನ್ನುವರು. ಕಾಯಕವನ್ನು ಮಾಡುತ್ತಲೇ ಹಳ್ಳಿಗರು ನಿರರ್ಗಳವಾಗಿ ಹಾಡುತ್ತಾ ಕಾಯಕದ ಪರಿಶ್ರಮವನ್ನು ಮರೆಯುತ್ತಿದ್ದರು.

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕ ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ॥

"ಕಲ್ಯಾಣದ ಬಸವಣ್ಣನವರು ಸರ್ವಜ್ಞಾನಿಗಳು. ದೈವೀ ಬೆಳಕನ್ನು (Divine Light) ತಂದು ಭೂಮಿಯ ಮೇಲೆ ಚೆಲ್ಲಿದರು. ಜನರು ಹೃದಯ ತುಂಬಿ ಅವರ ಸಾಧನೆಯನ್ನು ಕೊಂಡಾಡುವರು." ಎಂದು ಹೇಳುವಲ್ಲಿ ಗುರು ಬಸವಣ್ಣನವರ ಸಮಗ್ರ ಸಾಧನೆಯ ಸಮೀಕ್ಷೆ ಇದೆ. ಬಸವಣ್ಣನವರು ಅನೇಕ ಹೊಸತುಗಳಿಗೆ ಕಾರಣರಾದರು. ಅವರು ಒಂದು ಹೊಸ ಧರ್ಮದ ಪ್ರವರ್ತಕರಾದರು.

ವಚನ ಮಂಟಪ ಬಳ್ಳಿ ಶುಚಿ ಮೊಗ್ಗೆ ಹೂ ಬಿಡಲು
ರುಚಿ ಜೇನ ಹುಟ್ಟ ಹೊಸ ಮತವ ಕಟ್ಟಿದರು.
ವಚನ ಶಾಸ್ತ್ರಕರು ನಾಡೊಳಗೆ ॥

ಅನುಭವ ಮಂಟಪವೆಂಬ ವಚನ ಮಂಟಪವು ವಚನಗಳೆಂಬ ಹೂವು/ ಮೊಗ್ಗುಗಳನ್ನು ಅರಳಿಸಿತು. ಆಗ ಸಾಧಕರು, ಸಿದ್ಧಪುರುಷರು ಎಂಬ ಜೇನ್ನೊಣಗಳು ಹಾರಿ ಬಂದು ವಚನ ಸಾಹಿತ್ಯವನ್ನು ಪಾನ ಮಾಡಿ ಪುನಃ ತಮ್ಮ ಅನುಭಾವ ತುಂಬಿದ ವಚನಗಳು ಎಂಬ ಜೇನುತುಪ್ಪವನ್ನು ಕೊಡುಗೆಯಾಗಿ ತನ್ಮೂಲಕ ಹೊಸ ಮತವನ್ನು ಕೊಟ್ಟರು.

ಬಸವ ಸಾರಿದನಂದು ಕುಶಲದಲಿ ವಚನಗಳ
ಮುಸುಕಿರುಳು ಹರಿದು ನಸುಕಾತು ಜಗದೊಳಗೆ
ಹೊಸಮತದ ಸೂರ್ಯನು ಉದಿಸಿದನು ॥

ಗುರು ಬಸವಣ್ಣನವರು ವಚನಗಳನ್ನು ಸಾರಿದರು. ಆವರೆಗೆ ಹಬ್ಬಿದ್ದ ಇರುಳು, ಮುಸುಕು ಹರಿಯಿತು. ಬೆಳಕು ಮೂಡಿತು. ಜಗತ್ತಿಗೆ ಹೊಸಧರ್ಮ ಎಂಬ ಸೂರ್ಯನು ಉದಿಸಿದನು. ಇದರ ಪರಿಣಾಮ ಏನಾಯಿತು ?

ತುಂಬಿ ತುಳುಕಿತು ಬೆಳಕು ಇಂಬನೀಯಿತು ಜಗಕೆ
ಕಂಬ ಬಸವೆಂದು ಹೊಸಮತಕೆ । ಕಲ್ಯಾಣ
ಮುಂಬದಿಯ ಭೇರಿ ಮೊಳಗಿದವು.

ಎಲ್ಲೆಡೆಯಲ್ಲಿ ಜ್ಞಾನದ ಬೆಳಕು ಹರಿಯಿತು. ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರಿಗೂ ದೀಕ್ಷೆಯ ಮೂಲಕ ಇಂಬನ್ನು ಕೊಡಲಾಯಿತು. ಹೊಸಧರ್ಮದ ಆಧಾರ ಸ್ತಂಭ ಗುರು ಬಸವಣ್ಣನವರು







ಎಂದು ಕಲ್ಯಾಣ ಪಟ್ಟಣದ ಮುಂಬದಿಯಲ್ಲಿದ್ದ ಭೇರಿ ಮೊಳಗಿತು.

"ಲಿಂಗಾಯತವು ಒಂದು ಧರ್ಮ ಇದರ ಪ್ರವರ್ತಕರು ಗುರು ಬಸವಣ್ಣನವರು ವಚನ ಸಾಹಿತ್ಯವೇ ಇದರ ಧಾರ್ಮಿಕ ಸಂವಿಧಾನ" ಎಂಬ ಮಾತುಗಳನ್ನು ಅತ್ಯಂತ ಸ್ಪಷ್ಟವಾಗಿ ಜನಪದ ಕವಿಗಳು ಹೇಳಿದ್ದಾರೆ.

ಗುರು ಬಸವಣ್ಣನವರು ಮಂತ್ರಪುರುಷರು. ಅವರ ನಾಮವು ಪವಿತ್ರ ಮಂತ್ರವಾಯಿತು. "ಓಂ ಶ್ರೀ ಗುರು ಬಸವಲಿಂಗಾಯ ನಮಃ" ಮಂತ್ರವು ಎಂದಿನಿಂದಲೂ ಜನರ ನಾಲಿಗೆಯ ಮೇಲೆ ಉಲಿಯುತ್ತ ಬಂದಿದೆ. ಕೆಲವರು ಗುರು ಬಸವಣ್ಣನವರಿಗೂ ಪೂರ್ವದಲ್ಲೇ ಈ ಧರ್ಮವಿತ್ತು ಎನ್ನುವವರಿಗೆ ಈ ತ್ರಿಪದಿಗಳು ಉತ್ತರ ಕೊಡುತ್ತವೆ. ಒಂದು ಧರ್ಮದ ಆದ್ಯರ ಹೆಸರು ಮಾತ್ರ ಮಂತ್ರವಾಗುತ್ತದೆ.

ಬಸವಣ್ಣ ನಿನ್ಹೆಸರು ದೆಸೆದೆಸೆಗೆ ಶಿವಮಂತ್ರ
ಹೊಸಮತಕೆ ಮಂತ್ರ ನಿತ್ಯದಲಿ । ಒಕ್ಕಲಿಗ
ಹೊಸಮಂತ್ರ ಬಸವ ಜಪಿಸುವನು॥

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು । ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥

ಹೊಸಮತ (ಲಿಂಗಾಯತ)ದ ಅನುಯಾಯಿಗಳಿಗೆ ಗುರು ಬಸವಣ್ಣನವರ ಹೆಸರು ಹೊಸಮಂತ್ರವಾಯಿತು. ಭೂಮಿಯನ್ನು ಉಳುವಾಗ, ಬೀಜವನ್ನು ಬಿತ್ತುವಾಗ, ಬಂದ ಬೆಳೆಯನ್ನು ಕೊಯ್ಲು ಮಾಡುವಾಗ ಹೀಗೆ ಎಲ್ಲೆಡೆ ಬಸವ ನಾಮಸ್ಮರಣೆ. ಹೀಗಾಗಿ ಮರ್ತ್ಯ ಲೋಕದ ಜನರಿಗೆಲ್ಲ ಬಸವ ಮಂತ್ರವೇ ತಾರಕ.

### ಬಸವಣ್ಣನವರು ಸಮತಾವಾದಿ.

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ
ಭಲರೆ ಬಸವಯ್ಯ ಬಸವರಸ । ನಿನ್ನುಸುರು
ನೆಲೆಯಾತು ನಿತ್ಯ ಜನಪದಕೆ

ನಾಲ್ಕು ವರ್ಣಗಳು, ಐದನೆಯ ವರ್ಣದಲ್ಲಿ ಬರುವ ಹೊಲೆಯ, ಮಾದಿಗರು, ಎಲ್ಲರ ನಡುವೆ ಇದ್ದ ಮೇಲು ಕೀಳು-ಈ ಬಲೆಯನ್ನು ಕಿತ್ತೊಗೆದರು. ಹೀಗಾಗಿ ಜನಸಾಮಾನ್ಯರು ನೆಮ್ಮದಿಯಿಂದ ಬದುಕುವಂತಾಯಿತು.

ಓದಿದನು ಬಸವಯ್ಯ ವೇದದೊಳಗಿನ ಹುಸಿಯ
ಭೇದ ಭೇದವನೆ ಬಿಚ್ಚಿಟ್ಟ । ಜನಪದಕೆ
ತೇದುಂಡ ಜೀವಿ ಬಸವಣ್ಣ ॥

ವೇದಗಳು ಸಮಾಜದ ಮೇಲೆ, ಜನ ಸಾಮಾನ್ಯರ ಮೇಲೆ ಅನೇಕ ವಿಧಿನಿಷೇಧಗಳನ್ನು ಹೇರಿದ್ದವು. ಸಾಮಾಜಿಕ ನಿಬಂಧನೆ, ಮೂಢನಂಬಿಕೆ, ಮಡಿ-ಮೈಲಿಗೆ, ಸೂತಕ-ಪಾತಕ, ಕರ್ಮಕಾಂಡ-ಒಂದೊಂದೂ ಹೇಳಿದ ಹೆಬ್ಬಂಡೆಗಳಂತಿದ್ದು ಕೆಳವರ್ಗದವರಷ್ಟೇ ಅಲ್ಲ ಮೆಲ್ವರ್ಗಗಳವರು ಸಹ ಈ ನಂಬಿಕೆಗಳ ಪಾದಾಘಾತಕ್ಕೆ ಸಿಕ್ಕಿ ಒದ್ದಾಡುತ್ತಿದ್ದರು. ಗುರು ಬಸವಣ್ಣನವರು ವೇದದೊಳಗಿನ ಹುಸಿಯನ್ನು ಬಿಚ್ಚಿಟ್ಟರು. ವಿದ್ಯೆಯು ಯಾರನ್ನು ಸ್ಪರ್ಶಿಸಿರಲಿಲ್ಲವೋ ಅಂಥವರಿಗೆಲ್ಲ ಓದುಬರಹಗಳನ್ನು ಕಲಿಸಿದರು.

ಸಾಧು ಸಾಧೆಲೆ ಬಸವ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು । ಕೇಳಿದವು
ಮೇದಿನಿಗೆ ಬಂತು ಹೊಸಬೆಳಕು. ॥

ಜನ ಸಮುದಾಯ ಓದು ಕಲಿಯಿತು. ಇದರಿಂದ ಜ್ಞಾನದ ಹೊಸ ಮಾತುಗಳು ಕೇಳಿಬಂದವು. ಈ ವಿದ್ಯೆಯಿಂದಾಗಿ ಭೂಮಿಗೆ ಹೊಸಬೆಳಕು ಬಂದಿತು. ಇಂದಿನ ಸರಕಾರಗಳು ಜಾರಿಗೆ ತರುತ್ತಿರುವ ಸಮುದಾಯ ಶಿಕ್ಷಣ (Mass Education) ಮತ್ತು ವಯಸ್ಕರ ಶಿಕ್ಷಣ (Adult Education)ವನ್ನು 12 ನೆಯ ಶತಮಾನದಲ್ಲಿ ಗುರು ಬಸವಣ್ಣನವರು ಜಾರಿಗೆ ತಂದಿದ್ದರೆಂದು ನಮಗೆ ಹೆಮ್ಮೆ ಎನಿಸುತ್ತದೆ.

ಹಡೆದವ್ವ ಮಾದವ್ವ ಹಡೆದಪ್ಪ ಮಾದರಸ
ಪಡೆದವ್ವ ಅಕ್ಕ ನಾಗಾಯಿ । ಬಸವನಿಗೆ
ಬಿಡದೆ ಸಲಹಿದನು ವರಸಂಗ ॥

ಗುರು ಬಸವಣ್ಣನವರ ತಾಯಿ ಮಾದಲಾಂಬಿಕೆ, ತಂದೆ ಮಾದರಸ, ಅಕ್ಕ ನಾಗಲಾಂಬಿಕೆ, ಅನುಗ್ರಹಿಸಿದವನು ಶಿವರೂಪಿ ಸಂಗಮನಾಥ.

ಹುಟ್ಟಿ ಬಂದನು ಬಸವ ಕಟ್ಟುದಕೆ ಕಲ್ಯಾಣ
ಬಿಟ್ಟು ಬಾಗೋಡಿ ನಾಗಾಯಿ । ಯೊಡಗೂಡಿ
ಮೆಟ್ಟು ಮಾಡಿದನು ಸಂಗಮಕೆ ॥

ಇಂಗಳೇಶ್ವರ ಬಾಗೇವಾಡಿಯಲ್ಲಿ ಹುಟ್ಟಿದರು (30-4-1134), ನಂತರ ಕೂಡಲಸಂಗಮದಲ್ಲಿ ನೆಲೆಸಿ ವಿದ್ಯಾಭ್ಯಾಸ ಮಾಡಿದರು. ಅಕ್ಕನಾಗಲಾಂಬಿಕೆಯನ್ನು ಕೂಡಲ ಸಂಗಮದ ಬ್ರಹ್ಮಪುರಿಯ ಶಿವಸ್ವಾಮಿಗೆ ಮದುವೆ ಮಾಡಿಕೊಡಲಾಗಿತ್ತು.

ಬಸವ ಸಾಲಿಯ ಕಲಿತ ಎಸೆವ ಸಂಗಮದೊಳಗೆ
ಹೆಸರು ಪಡಕೊಂಡ ಜಗದೊಳಗೆ । ವರಸಂಗ
ಹಸು ಮಗನ ಹರಸಿ ಸಲಹಿದನು ॥

ಗುರು ಬಸವಣ್ಣನವರು ಕೂಡಲಸಂಗಮದಲ್ಲಿ ವಿದ್ಯಾಭ್ಯಾಸ ಮಾಡಿದರು. ವಿದ್ಯಾರ್ಥಿ ದೆಸೆಯಲ್ಲಿಯೇ ಅವರ ಕೀರ್ತಿ ಹಬ್ಬಿ ಹಸರಿಸಿತು. ಶಿವರೂಪಿ ಸಂಗಮನಾಥ ಅವರನ್ನು ಹರಸಿ ಸಲಹಿದನು.

ಹುಸಿವೇದ ಹಾರುವರು ಹಸಗೆಟ್ಟ ಲೋಕದಲಿ
ಗುಸುಮುಸಿಯು ನಡೆಯೆ ಬಸವನಿಗೆ ವರಸಂಗ
ಹೊಸತು ಊದಿದನು ಕಿವಿ ಮಾತ

ಬಸವಣ್ಣನವರಿಗೆ ಒಬ್ಬ ಗುರುವಿರಲೇ ಬೇಕಲ್ಲವೆ ? ಎಂಬ ಸಂದೇಹವನ್ನು ಕೆಲವರು ಎತ್ತುವರು. ಅವರಿಗೆ ಈ ತ್ರಿಪದಿಯಲ್ಲಿ ಉತ್ತರವಿದೆ. ಗುರು ಬಸವಣ್ಣನವರಿಗೆ ಯಾರೂ ವ್ಯಕ್ತಿ ಗುರು(Personal Guru)ವಿಲ್ಲ. ಸಾಕ್ಷಾತ್ ಶಿವನೇ ಜ್ಞಾನಗುರುವಾಗಿ ಅನುಗ್ರಹಿಸಿದ್ದಾನೆ ಎಂಬ ಸತ್ಯವನ್ನು ಜನಪದ ಕವಿಗಳು ದಾಖಲಿಸಿದ್ದಾರೆ.

ಮೆಚ್ಚಿದನು ಬಲದೇವ ಇಚ್ಚೆಯಲಿ ಮಗಳಿತ್ತ
ಕೆಚ್ಚೆದೆಯ ವೀರ ಬಸವನಿಗೆ । ಕಲ್ಯಾಣ
ನೆಚ್ಚಿ ಸಲುಹೆಂದು ಕೈ ಮುಗಿದು ॥

ಬಲದೇವ ಮಂತ್ರಿಗಳು ತಮ್ಮ ಏಕೈಕ ಪುತ್ರಿ ನೀಲಗಂಗಾಂಬಿಕೆಯನ್ನು ಗುರು ಬಸವಣ್ಣನವರಿಗೆ ಕೊಟ್ಟು ವಿವಾಹ ಮಾಡಿದರು.

ಅರಸ ಬಿಜ್ಜಳರಾಯ ಮರೆತಂದು ಕುಲಮತವ
ಕರೆಸಿ ಬಸವನಿಗೆ ಒಪ್ಪಿಸಿದ । ಮಂತ್ರಿಪದ
ಹರುಷದಲಿ ರಾಜ ಮುದ್ರಿಕೆಯ ॥

ಗುರುಬಸವಣ್ಣನವರ ಮುತ್ಸದ್ಧಿತನ, ಬುದ್ಧಿವಂತಿಕೆ ಕಂಡು ಬಿಜ್ಜಳ ಅವರನ್ನು ಭಂಡಾರಿ (ಅರ್ಥಮಂತ್ರಿ)ಯನ್ನಾಗಿ ಮಾಡಿ ರಾಜಮುದ್ರಿಕೆಯನ್ನು ನೀಡಿದ.

ಸಾಗಿ ಬಸವನು ಬಂದು ತೂಗಿದನು ಕಲ್ಯಾಣ
ಹಾಗಿನಲ್ಲಿ ಕಟ್ಟಿ ಅನುಭಾವ । ಮಂಟಪವ
ಕೂಗು ಕೇಳುತಲಿ ಜನವೆದ್ದು ॥

ಗುರು ಬಸವಣ್ಣನವರು ಕಟ್ಟಿದ ಅಭೂತಪೂರ್ವ ಸಂಸ್ಥೆ ಅನುಭವ ಮಂಟಪ. ಜಗತ್ತಿನ ಮೊಟ್ಟ ಮೊದಲ ಲೋಕಸಭೆ ಎಂಬ ಹೆಗ್ಗಳಿಕೆಗೆ ಪಾತ್ರವಾಗುವ ಅನುಭವ ಮಂಟಪ ಒಂದು ಅಧ್ಯಾತ್ಮಿಕ ವಿಶ್ವವಿದ್ಯಾಲಯ. ಇದಕ್ಕೆ ಹೋಲಿಕೆ ಕೊಡುವಂತಹ ಮತ್ತೊಂದು ಸಂಸ್ಥೆಯೇ ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಇಲ್ಲ ಎಂಬುದು ಪರಮಸತ್ಯ.





ಕೂಡಿದರು ಹುರುಪಿನಲಿ ನಾಡ ಬಲ್ಲಿದರೆಲ್ಲ
ಸೂಡಕಟ್ಟಿದರು ಶಿವನುಡಿಯ । ಕಾಯಕದ
ಗೂಡಾತು ಲೋಕ ಜನ ಹಿಗ್ಗಿ ॥

ನಾಡಿನ ಜ್ಞಾನಿಗಳು, ವಿಚಾರಶೀಲರು ಎಲ್ಲರೂ ಕಲ್ಯಾಣದಲ್ಲಿ ಒಟ್ಟುಗೂಡಿದರು. ಕಲ್ಯಾಣ ಎಂಬ ಪದವು ಶಿವನ ಉಯ್ಯಾಲೆಯಂತೆ ತೂಗತೊಡಗಿತು. ಜನಮನದ ಹೃದಯದಲ್ಲಿ ಅನುಭವ ಮಂಟಪವು ಅಪೂರ್ವ ಜ್ಞಾನ ಕೇಂದ್ರ, ಕಾಯಕ ಕೇಂದ್ರವಾಯಿತು.

ಅರ್ಪಣೆಯು ಅನುಭಾವ ಹೆಪ್ಪುಗಟ್ಟಿತು ಲೋಕ
ಬೆಪ್ಪಾತು ನಾಕ ಕಾಯಕದ । ಹಾಲ್ಹೊಳೆಯ
ತೆಪ್ಪ ದಾಸೋಹ ತೇಲುತಲಿ ॥

ಕಾಯಕವೇ ಕೈಲಾಸ ಎಂಬ ದುಡಿಮೆಯ ಸೂತ್ರದಿಂದ ಸಮೃದ್ಧಿಯ ಹಾಲಿನ ಹೊಳೆಯು ಹರಿಯತೊಡಗಿತು. ಅದರಲ್ಲಿ ದಾಸೋಹದ ತೆಪ್ಪ ತೇಲ ತೊಡಗಿತು. ಗುರು ಬಸವಣ್ಣನವರು ಕೊಟ್ಟ ತ್ರಿತತ್ತ್ವಗಳೆಂದರೆ ಅರ್ಚನೆ, ಅರ್ಪಣೆ, ಅನುಭಾವ. ಸುಪ್ರಭಾತದಲ್ಲಿ ನಿಷ್ಠೆಯಿಂದ ಇಷ್ಟಲಿಂಗಾರ್ಚನೆ ಮಾಡುವುದು. ಮಧ್ಯಾಹ್ನದಿಂದ ಸಂಜೆಯವರೆಗೆ ಅರ್ಪಣಾ ತತ್ತ್ವ, ಇದರಲ್ಲಿ ಮೂರು ಅಂಗಗಳು ಕಾಯಕ, ದಾಸೋಹ, ಪ್ರಸಾದ. ಸತ್ಯ ಶುದ್ಧ ಕಾಯಕವನ್ನು ಅವಲಂಬಿಸಿ ಹಣವನ್ನು ಸಂಪಾದಿಸುವುದು. ತನ್ನ ಗಳಿಕೆಯ ಒಂದು ಪಾಲನ್ನು ಧರ್ಮ-ಸಮಷ್ಟಿಯ ಉದ್ಧಾರಕ್ಕೆ ದಾಸೋಹದ ಮೂಲಕ ಸಲ್ಲಿಸುವುದು. ಕಾಯಕದಿಂದ ಗಳಿಸಿ ದಾಸೋಹದಿಂದ ಬಳಸಿ ತಾನು ಉಣ್ಣುವುದೆಲ್ಲವೂ ಪ್ರಸಾದ. ಇನ್ನು ಸಂಜೆಯ ವೇಳೆಯಲ್ಲಿ 'ಅನುಭಾವ' ಶರಣರ ಸತ್ಸಂಗದಲ್ಲಿ ಒಡನಾಡುವುದು, ಧರ್ಮಚಿಂತನೆ ಮಾಡುವುದೇ ಅನುಭಾವ.

ಅನುಭವ ಮಂಟಪಕ್ಕೆ ನಾಡಿನ ಮೂಲೆಮೂಲೆಗಳಿಂದ ಶರಣರು ಆಗಮಿಸಿದರು. ಅಲ್ಲಮ ಪ್ರಭುದೇವ, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ ಮುಂತಾದ ಶರಣರ ಸಮೂಹ ನೆರೆಯಿತು. ವಚನ ಸಾಹಿತ್ಯವು ಹುಲುಸಾಗಿ ಸೃಷ್ಟಿಯಾಯಿತು. ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯವು ಮಾನವೀಯ ಮೌಲ್ಯಗಳಿಂದ ಕೂಡಿದ ಪ್ರಗತಿಪರ ಚಿಂತನೆಯ ವೈಚಾರಿಕ ಸಾಹಿತ್ಯ. ಗುರುತ್ತ್ವವು ಜಾತಿಯಿಂದ ಬರದು. ಆತ್ಮಜ್ಯೋತಿಯಿಂದ ಮಾತ್ರ ಎಂಬುದನ್ನು ಸಾರುವಂತೆ ಗುರು ಬಸವಣ್ಣನವರು ಶೂನ್ಯ ಪೀಠ ಎಂಬ ಧಾರ್ಮಿಕ ಪೀಠವನ್ನು ಸ್ಥಾಪಿಸಿ ಶೂದ್ರಾತಿಶೂದ್ರ ಕುಲದಲ್ಲಿ ಹುಟ್ಟಿದ ಅಲ್ಲಮ ಪ್ರಭುದೇವರನ್ನು ಪ್ರಥಮ ಜಗದ್ಗುರುವನ್ನಾಗಿ ಮಾಡಿದರು.

ಅಲ್ಲಮನೆ ಗುರುವಾದ ಕಲ್ಯಾಣ ಮಂಟಪಕೆ
ಕಲ್ಲೆದೆಯ ಬಂಟ ಮಡಿವಾಳ । ಕರುವಾಳು
ಸಲ್ಲಿಸಲು ಸೇವೆ ಮಂಟಪಕೆ ॥

ಅಲ್ಲಮನು ಸಿದ್ಧರಾಮ ಬಲ್ಲಿದೆಲ್ಲರು ಬರಲು
ಕಲ್ಯಾಣ ಮನೆಗೆ ಕಳೆಬಂತು । ಬಸವಯ್ಯ
ಎಲ್ಲಿ ಹೋದಲ್ಲಿ ಬೆಲ್ಲಾದ ॥

ಮಹಾಜ್ಞಾನಿಯೂ, ಶೂನ್ಯ ಕಾಯ ಸಿದ್ಧನು ಆದ ಅಲ್ಲಮಪ್ರಭು, ಯೋಗ ಸಿದ್ಧನಾದ ಸಿದ್ಧರಾಮೇಶ್ವರ ಮುಂತಾದ ಪ್ರಖ್ಯಾತರೆಲ್ಲರೂ ಆಗಮಿಸಿ ಬಸವಣ್ಣನವರ ಜೊತೆ ಕೈ ಜೋಡಿಸಲು ಕಲ್ಯಾಣದ ಮಹಾಮನೆಗೆ ಕಳೆಬಂದಿತು. ಗುರು ಬಸವಣ್ಣನವರು ಎಲ್ಲರಿಗೆ ಅತಿ ಪ್ರೀತಿ ಪಾತ್ರರಾದರು.

ಹೀಗಿರುವಾಗ ಒಂದು ಪ್ರಸಂಗ ಜರುಗಿತು. ಒಂದು ದಿನ ಗುರು ಬಸವಣ್ಣನವರು ಅರಮನೆಯಿಂದ ಬರುತ್ತಿದ್ದಾರೆ. ದಾರಿಯಲ್ಲಿ ಜನ ಅವರ ದರ್ಶನಕ್ಕಾಗಿ ಹಾತೊರೆಯುತ್ತಿದ್ದಾರೆ. ಚಮ್ಮಾವುಗೆಗಳನ್ನು ಮಾರಲಿಕ್ಕೆ ಬಂದ ಹರಳಯ್ಯನವರು ಗುರು ಬಸವಣ್ಣನವರನ್ನು ಕಂಡು "ಶರಣು ಬಸವಣ್ಣ" ಎಂದು ಶರಣು ಮಾಡುತ್ತಾರೆ. ಅದಕ್ಕೆ ಪ್ರತಿಯಾಗಿ ಅವರು ಎರಡೂ ಕೈಗಳನ್ನು ಮುಗಿದು, "ಶರಣು ಶರಣಾರ್ಥಿ ಶರಣ ಹರಳಯ್ಯ" ಎಂದು ಮುಂದೆ ಸಾಗುವರು. ಗುರು ಬಸವಣ್ಣನವರು ಒಂದು ಶರಣು ಹೆಚ್ಚುವರಿಯಾಗಿ ತನ್ನಂತಹ ಸಾಮಾನ್ಯ ಅನುಯಾಯಿಗೆ ಹೇಳಿದ್ದು ಅವರಿಗೆ ಬಲುಭಾರ

ಎನ್ನಿಸುತ್ತದೆ. ಅದೇ ಚಿಂತೆಯಲ್ಲಿ ಮನೆಗೆ ಬಂದಾಗ ಮಡದಿ ಕಲ್ಯಾಣಮ್ಮ ಒಂದು ಶರಣೆನ ಭಾರ ತೀರಿಸಲು ತಮ್ಮ ತೊಡೆಯ ಚರ್ಮದಿಂದ ಚಮ್ಮಾವುಗೆಗಳನ್ನು ಮಾಡಿಕೊಡಬಹುದೆಂಬ ಸಲಹೆ ನೀಡಿದಳು. ಸಹರ್ಷದಿಂದ ಒಪ್ಪಿಕೊಂಡ ಹರಳಯ್ಯನವರು ಪತ್ನಿಯ ಎಡತೊಡೆಯ ತಮ್ಮ ಬಲತೊಡೆಯ ಚರ್ಮವನ್ನು ತೆಗೆದು ಒಂದು ಜೊತೆ ಸುಂದರವಾದ ಚಮ್ಮಾವುಗೆಗಳನ್ನು ಮಾಡಿದರು. ಅವನ್ನು ಭಕ್ತಿಯಿಂದ ಅರ್ಪಿಸಲು ಮಹಾಮನೆಗೆ ಹೋದರು.

ಗುರು ಬಸವಣ್ಣನವರು ಆ ಚಮ್ಮಾವುಗೆಗಳನ್ನು ಮೆಟ್ಟದೆ, ತಲೆಯ ಮೇಲೆ ಇಟ್ಟುಕೊಂಡು ಹರಳಯ್ಯ-ದಂಪತಿಗಳ ತ್ಯಾಗವನ್ನು ಕೊಂಡಾಡಿದರು. ವಾಪಸ್ಸು ಪಡೆದ ಚಮ್ಮಾವುಗೆಗಳನ್ನು ತೆಗೆದುಕೊಂಡು ಹರಳಯ್ಯ ದಂಪತಿಗಳು ಮನೆಯ ಕಡೆ ಮರಳುವಾಗ ಮಂತ್ರಿ ಮಧುವರಸ ಅವು ತನಗೆ ಬೇಕೆಂದು ಕೇಳಿದ. ಬೇಡವೆಂದು ವಿನಂತಿಸಿಕೊಂಡರೂ ಮೆಟ್ಟಿ, ಉರಿತಾಪವೆದ್ದು ಸಂಕಟ ಅನುಭವಿಸಿದ. ಹರಳಯ್ಯನವರ ಮನೆಯ ಕರಿ ಬಾನೆಯ ನೀರಿನಿಂದ ಮಿಂದರೆ ಮಾತ್ರ ತಾಪವು ಅಳಿಯುವುದು ಎಂಬ ಬಸವಣ್ಣನವರ ವಾಣಿಯಂತೆ ಮಗಳು ಲಾವಣ್ಯವತಿ ಹರಳಯ್ಯನವರ ಮನೆಗೆ ಹೋಗಿ ನೀರನ್ನು ಬೇಡಿ ತಂದಳು. ಆ ನೀರಲ್ಲಿ ಮಿಂದಾಗ ಉರಿತಾಪವಳಿಯಲು ಮಧುವರಸರ ಕಣ್ತೆರೆಯಿತು. ಆತನು ಮಗಳ ಸಹಿತವಾಗಿ ದೀಕ್ಷೆ ಪಡೆದುದಲ್ಲದೆ ಮಗಳನ್ನು ಹರಳಯ್ಯನವರ ಮಗ ಶೀಲವಂತನಿಗೆ ಕೊಟ್ಟು ವಿವಾಹ ಮಾಡಬಯಸಿದ . ಅನುಭವ ಮಂಟಪದ ಒಪ್ಪಿಗೆ ದೊರೆಯಿತು. ಭಾರತ ದೇಶದ ಇತಿಹಾಸದಲ್ಲಿಯೇ ಮೊಟ್ಟ ಮೊದಲನೆಯ ಅಧಿಕೃತ ವರ್ಣಾಂತರ ವಿವಾಹ ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಜರುಗಿತು. ಇದು ಸಂಪ್ರದಾಯವಾದಿಗಳ ಹೊಟ್ಟೆಯಲ್ಲಿ ಕಿಚ್ಚೆಬ್ಬಿಸಿತು.

ಅವರು ಬಿಜ್ಜಳರಾಜನನ್ನು ಪ್ರಚೋದಿಸಿ ಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗುವಂತೆ ಮಾಡಿದರು. ಅವರು ಕಲ್ಯಾಣವನ್ನು ಬಿಟ್ಟನಂತರ ವಿವಾಹದಲ್ಲಿ ಭಾಗಿಯಾದ ಮೂವರು ಶರಣರಿಗೆ ಎಳೆಹೂಟೆ ಶಿಕ್ಷೆ ನೀಡಲಾಯಿತು. ಕಲ್ಯಾಣ ಉದ್ವಿಗ್ನವಾಗಿ ಕ್ರಾಂತಿಯಾಯಿತು.

ಗುರುಬಸವಣ್ಣನವರು ಕಲ್ಯಾಣವನ್ನು ತೊರೆದು ಸಂಚಾರ ಮಾಡುತ್ತ, ಜನರನ್ನು ಕುರಿತು ಬೋಧೆ ಮಾಡುತ್ತ ಕೂಡಲಸಂಗಮಕ್ಕೆ ಬಂದರು. ನಳನಾಮ ಸಂವತ್ಸರದ ಶ್ರಾವಣಶುದ್ಧ ಪಂಚಮಿಯಂದು ತಮ್ಮ ಪೂಜಾ ಗವಿಯಲ್ಲಿ ಯೋಗ ಮಗ್ನರಾಗಿರುವಾಗ ಅವರಿಗೆ ದೇವರಿಂದ ಕರೆ ಬಂದಿತು. "ಬಸವಣ್ಣಾ, ನೀನು ಮರ್ತ್ಯಕ್ಕೆ ಬಂದ ಮಣಿಹ ಪೂರೈಸಿತು. ನೀನು ನನ್ನಲ್ಲಿ ಒಂದಾಗು" ಎಂಬ ವಾಣಿಯನ್ನು ಕೇಳಿ ಗುರು ಬಸವಣ್ಣನವರು ಇಚ್ಛಾಮರಣಿಯಾಗಿ ಯೋಗಶಕ್ತಿಯಿಂದ ಪ್ರಾಣಬಿಡಲು ಸಂಕಲ್ಪ ಮಾಡುವರು. ತಮ್ಮ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸಿಕೊಂಡು ಮೇಲಕ್ಕೇರಿಸಿ ಹೃದಯ ಕಮಲದಲ್ಲಿ, ಆಜ್ಞಾದಲ್ಲಿ ನಿಲ್ಲಿಸಿ ನಂತರ ಸಹಸ್ರಾರಕ್ಕೆ ಏರಿಸಿ ಇನ್ನೂ ಮುಂದಿನ ಶಿಖಾಚಕ್ರಕ್ಕೆ ಒಯ್ದು, ಪಶ್ಚಿಮ ಚಕ್ರದ ಕವಾಟವನ್ನು ಬಿಚ್ಚಿ ಪ್ರಾಣವನ್ನು ವಿಸರ್ಜಿಸುವುದು. ಪಶ್ಚಿಮ ಚಕ್ರದ ದ್ವಾರದ ಮೂಲಕ ಆತ್ಮವು ದೇಹದಿಂದ ಬಿಡುಗಡೆಯಾಗಿ ಪರಮಾತ್ಮ ಚೈತನ್ಯದಲ್ಲಿ ಲೀನವಾಗುವುದು.

ಕಲ್ಯಾಣದಲ್ಲಿ ಶರಣರ ವಧೆಯಾದ ನಂತರ ವಾತಾವರಣ ಅಲ್ಲೋಲ ಕಲ್ಲೋಲವಾಯಿತು. ಜಗದೇವ, ಮಲ್ಲಣ್ಣ ಬೊಮ್ಮಣ್ಣರಿಂದ ಬಿಜ್ಜಳನ ವಧೆಯಾಯಿತು. ವಾತಾವರಣ ಇನ್ನೂ ಉದ್ವಿಗ್ನವಾಯಿತು. ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶ ಮಾಡಲು ಪಣತೊಟ್ಟರು. ಆಗ ಚಿನ್ಮಯ ಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ ವೀರ ಗಣಾಚಾರಿ ಮಡಿವಾಳ ಮಾಚಿದೇವರ ನೇತೃತ್ವದಲ್ಲಿ ವಚನ ಸಾಹಿತ್ಯವನ್ನು ಹೊತ್ತು ಶರಣರು ಸಹ್ಯಾದ್ರಿಯ ದುರ್ಗಮ ಅರಣ್ಯವನ್ನು ಪ್ರವೇಶಿಸಿದರು. ಮಧ್ಯದಲ್ಲಿ ಬಿಜ್ಜಳನ ಸೈನ್ಯದೊಡನೆ ಹೋರಾಡಬೇಕಾಯಿತು. ಮೊದಲನೆ ಯುದ್ಧ ಕಾದರವಳ್ಳಿ ಬಳಿ ನಡೆದಾಗ ಶರಣರಿಗೆ ಸೋಲಾಯಿತು. ಎರಡನೆ ಯುದ್ಧ ಮುರುಗೋಡು ಬಳಿ ಬಂದಾಗ ಶರಣರ ಕೈ ಮೇಲಾಗಿ ಬಿಜ್ಜಳನ ಸೈನ್ಯ ಹಿಮ್ಮೆಟ್ಟಿತು.

ಚನ್ನಬಸವೇಶ್ವರನು ಉನ್ನತಾನುಭಾವಿಗಳು
ಚಿನ್ನಮಯವಾಯಿತು ಆ ಉಳಿವೆ । ಲಿಂಗಿಗಳ
ಕನ್ನೆ ಭಕ್ತಿಯ ಗೂಡಾತು. ॥

ಉಳಿವೆಯ ಕಾನನದಲ್ಲಿ, ಅರಣ್ಯದಲ್ಲಿದ್ದ ಗವಿಗಳಲ್ಲಿ ಸಾಹಿತ್ಯವನ್ನಿಟ್ಟು ಸಂರಕ್ಷಿಸಿದರು. ಪುನಃ ಉಳವಿಯಲ್ಲಿ ಮಹಾಮನೆ, ದಾಸೋಹ ಪ್ರಾರಂಭವಾದವು. ಕೆಲವು ಕಾಲ ವೈಭವದಿಂದ ನಡೆಯಿತು. ***





## ವಿಶ್ವಗುರು ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ ಯೋಜನೆ

### ದೇಣಿಗೆಯ ಬಗೆಗಳು

1. ಸ್ವಯಂ ಪ್ರೇರಣೆಯಿಂದ ಶಕ್ತ್ಯಾನುಸಾರ ಭಕ್ತಿಯಿಂದ ಎಷ್ಟು ಕೊಟ್ಟರೂ ಸ್ವೀಕರಿಸಲಾಗುವುದು.
2. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ದಾನಿಗಳ ಫಲಕದ ಮೇಲೆ ಬರೆಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
4. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಿ ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ (ಹಿಂದೆ, ಎಡ ಮತ್ತು ಬಲ ಪಕ್ಕ) ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದು.
5. ಒಂದು ಲಕ್ಷರೂ ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ ಬರುವ ಸ್ಥಳಗಳಲ್ಲಿ ಒಂದು ಕಡೆ ಮ್ಯೂಸಿಯಮ್‌ನಲ್ಲಿ ಒಳಗೆ ಹಾಕಿಸಲಾಗುವುದಲ್ಲದೆ ದಾನಿಗಳ ಒಂದು ಭಾವಚಿತ್ರವನ್ನು ಪ್ರದರ್ಶಿಸಲಾಗುವುದು.

## ಗುರು ಬಸವಣ್ಣನವರ ಜೀವನ ಚರಿತ್ರೆ ಚಿತ್ರಣ

ಬಸವ ಪುತ್ಥಳಿಯ ಕೆಳಗಿನ ಪೀಠದ ಎರಡು ಅಂತಸ್ತುಗಳಲ್ಲಿ ಗುರು ಬಸವಣ್ಣನವರ ಸಮಗ್ರ ಜೀವನ ಚಿತ್ರಿಸುವ 3ಡಿ ಮೂರ್ತಿಗಳನ್ನು ಕೂರಿಸಲಾಗುತ್ತಿದೆ. 32 ಪ್ರಮುಖ ಘಟನೆಗಳನ್ನು ಆಯ್ದುಕೊಳ್ಳಲಾಗಿದೆ. ಇದಕ್ಕೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆ ಸಹ ಇರುತ್ತದೆ. ಒಂದೊಂದು ಘಟನೆ ಚಿತ್ರಿಸಲು 1,50,000 (ಒಂದೂವರೆ ಲಕ್ಷ) ರೂ.ಗಳ ಖರ್ಚು ಬರುತ್ತದೆ. ಕೊಟ್ಟ ದಾನಿಗಳ ಹೆಸರಿನ ನಾಮಫಲಕವನ್ನು ಆ ಘಟನೆಯ ಚಿತ್ರದ ಮುಂಬದಿಯಲ್ಲಿ ದಾನಿಗಳ ಭಾವಚಿತ್ರ ಸಹಿತವಾಗಿ ಪ್ರದರ್ಶಿಸಲಾಗುವುದು.

## 108 ಮೆಟ್ಟಿಲು ಯೋಜನೆ

ನೆಲ ಮಟ್ಟದಿಂದ ಬಸವ ಮೂರ್ತಿಯ ಪೀಠದವರೆಗೆ ಏರಲು 108 ಮೆಟ್ಟಲು, ಇಳಿಯಲು 108 ಮೆಟ್ಟಲು ಮಾಡಲಾಗುತ್ತಿದೆ. ಇವಕ್ಕೆ ಗ್ರಾನೈಟ್ ಹಾಕಿಸಲಾಗುವುದು. ಒಂದೊಂದು ಮೆಟ್ಟಲಿನ ಸಂಪೂರ್ಣ ವೆಚ್ಚ 15,000 (ಹದಿನೈದು ಸಾವಿರ) ಬರುತ್ತಿದೆ. ಕೊಟ್ಟ ದಾನಿಗಳ ಹೆಸರನ್ನು ಮೆಟ್ಟಲಿನ ಕಲ್ಲಿನ ಮೇಲೆ ಕೆತ್ತಿಸಲಾಗುವುದು.

## ವಿಶೇಷ ಸೂಚನೆ

ಈ ಯೋಜನಾ ಪತ್ರ ನೋಡಿದ ನೀವೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಕೊಡಲು, ನಿಮ್ಮ ಬಂಧು-ಮಿತ್ರರಿಂದ ಕೊಡಿಸಲು ಆಸಕ್ತವಹಿಸಬೇಕಾಗಿ ವಿನಂತಿಸುತ್ತೇವೆ. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಪಡೆದಿದ್ದು ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು. ಈ ಸೌಲಭ್ಯವು ನವೀಕರಣಗೊಂಡು ಚಾಲ್ತಿಯಲ್ಲಿದೆ ಎಂಬುದನ್ನು ದಾನಿಗಳ ಗಮನಕ್ಕೆ ತರಲು ಬಯಸುತ್ತೇವೆ.

ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೇ ಮುಖ್ಯ ರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು-560010
ದೂರವಾಣಿ : -080-23131476

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ
ಬಸವ ಮಹಾಮನೆ. ಮುಖ್ಯ ರಸ್ತೆ
ಬಸವ ಕಲ್ಯಾಣ, ಜಿಲ್ಲೆ: ಬೀದರ್
ದೂರವಾಣಿ : 9448732456, 9480497346

ಭಾಗ -41

# ಬಸವ ವಚನಾಮೃತ

- ಮಾತಾಜಿ

801. ತಂಗಟೂರ ಮಾರಯ್ಯನ ಹಿರಿಮೆ.

ಕಾಯದ ಗಡಣ ಕೆಲಬರಿಗುಂಟು,
ಜೀವದ ಗಡಣ ಕೆಲಬರಿಗುಂಟು,
ಭಾವದ ಗಡಣ ಕೆಲಬರಿಗುಂಟು,
ವಚನದ ಗಡಣ ಕೆಲಬರಿಗುಂಟು.
ಪ್ರಾಣಲಿಂಗದ ಗಡಣ ಆರಿಗೂ ಇಲ್ಲ,
ಲಿಂಗದೇವನ ಶರಣರೊಳಗೆ
ತಂಗಟೂರ ಮಾರಯ್ಯಂಗಲ್ಲದೆ. –ಬವದೀ. 803

ಗಡಣೆ ಅಂದರೆ ಲಕ್ಷ್ಯ, ಗಮನ. ಕೆಲವರು ತಮ್ಮ ಶರೀರದ ಆರೋಗ್ಯವನ್ನು ಕಾಯ್ದುಕೊಳ್ಳಲು, ಸೌಂದರ್ಯವನ್ನು ರಕ್ಷಿಸಲು ಬಹಳ ಗಮನವನ್ನು ಕೊಡುವುದುಂಟು. ಇವರನ್ನು ದೇಹೋಹಂ ಭಾವಿಗಳು ಎನ್ನಬಹುದು. ಇನ್ನು ಕೆಲವರು ತಮ್ಮ ಜೀವದ ರಕ್ಷಣೆಗೆ ಅತಿ ಹೆಚ್ಚಿನ ಗಮನವನ್ನು ಕೊಡುವರು. ಪ್ರಾಣಭಯದಲ್ಲೇ ನರಳುವರು. ಇನ್ನು ಕೆಲವರು ಸದ್ಭಾವಿಗಳಾಗಿ ಇನ್ನೊಬ್ಬರನ್ನು ಆದರಿಸುವುದರಲ್ಲಿ, ಉಪಚರಿಸುವುದರಲ್ಲಿ ಆಸಕ್ತರು. ಮತ್ತೆ ಕೆಲವರಿಗೆ ಚೆಂದಾಗಿ ಮಾತನಾಡಿ ಇತರರನ್ನು ರಂಜಿಸುವುದರಲ್ಲಿ ಆಸಕ್ತಿ. ಪ್ರಾಣಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಅದರ ಆನಂದವನ್ನು ಸವಿಯಬೇಕು ಎಂಬ ಹಂಬಲ ಬಹಳ ಜನರಲ್ಲಿ ಇರುವುದಿಲ್ಲ. ಆದರೆ ಶರಣನಾದ ಮಾರಯ್ಯ ಪ್ರಾಣಲಿಂಗದ ಸಾಕ್ಷಾತ್ಕಾರದಲ್ಲಿ ಬಹಳ ಮುಂದಿರುವನು.

802. ಶರಣನ ಮುಖ್ಯ ಲಕ್ಷಣ ಭಕ್ತಿ.

ಚಂದ್ರಕಾಂತದ ಶಿಲೆಯಲ್ಲಿ ಜಲವಿಲ್ಲದನ್ನಕ್ಕ
ಶೈತ್ಯವ ತೋರುವ ಪರಿಯೆಂತೋ ?
ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿಯಿಲ್ಲದನ್ನಕ್ಕ
ಉಷ್ಣವ ತೋರುವ ಪರಿಯೆಂತೋ?
ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ
ಲಿಂಗದೇವಯ್ಯನನರಿವ ಪರಿಯೆಂತೋ? –ಬವದೀ. 804

ಚಂದ್ರಕಾಂತ ಶಿಲೆ ಎಂದರೆ ಅಮೃತಶಿಲೆ. ಇದು ತಂಪಾಗಿರುತ್ತದೆ. ಕಾರಣವೆಂದರೆ ಇದರಲ್ಲಿ ನೀರಿನ ಅಂಶ ಅಂತರ್ಗತವಾಗಿರುತ್ತದೆ. ಶೀತಲತೆಯೇ ಅಮೃತಶಿಲೆಯ ಮುಖ್ಯ ಲಕ್ಷಣ. ಅದೇ ರೀತಿ ಸೂರ್ಯಕಾಂತ ಶಿಲೆಯಲ್ಲಿ ಅಗ್ನಿಯ ಅಂಶ ಅಧಿಕವಾಗಿರುತ್ತದೆ. ಇದಕ್ಕೆ ಚಕ್ಕಮಕ್ಕಿ ಕಲ್ಲು ಎನ್ನುವರು. ಹಿಂದಿನ ಕಾಲದಲ್ಲಿ ಎರಡು ಚಕ್ಕಮಕ್ಕಿ ಕಲ್ಲನ್ನು ಘರ್ಷಿಸಿ ಬೆಂಕಿಯ ಕಿಡಿಯನ್ನು ಉತ್ಪತ್ತಿ ಮಾಡಿಕೊಂಡು ನಂತರ ಅದನ್ನು ಅರಳೆಗೆ ಹಚ್ಚಿಕೊಂಡು, ಕಟ್ಟಿಗೆಗೆ ಹಚ್ಚಿಕೊಳ್ಳುತ್ತಿದ್ದರು. ಸೂರ್ಯಕಾಂತ ಶಿಲೆಯಲ್ಲಿ ಅಧಿಕವಾಗಿರುವುದು ಅಗ್ನಿಯ ಅಂಶ. ಅದೇ ರೀತಿ ಲಿಂಗದೇವನನ್ನರಿಯಲು ಶರಣನಿಗೆ ಬೇಕಾದುದು ಭಕ್ತಿ. ಒಂದು ಮಲಿನವಾದ ಬಟ್ಟೆ ಇದೆ ಎಂದುಕೊಳ್ಳುವ. ಅದನ್ನು ತೊಳೆಯಲು ಬೇಕಾದುದು ನೀರು, ಸೋಪು, ಒಗೆತ; ಒಂದು ವೇಳೆ ಸೋಪು ಸಿಗಲಿಲ್ಲ ಎಂದುಕೊಳ್ಳುವಾ. ಬರೀ ನೀರಿನಲ್ಲಿ ಎದ್ದಿ ಬಟ್ಟೆಯನ್ನು ಮಡಿ ಮಾಡುತ್ತೇವಷ್ಟೆ. ಹಾಗೆ ಹೃದಯದ ಬಟ್ಟೆಯನ್ನು ಶುದ್ಧಿ ಮಾಡಲು ಭಕ್ತಿಯ ನೀರು, ಸುಜ್ಞಾನದ ಸೋಪು, ಸತ್ಕ್ರಿಯೆ ಎಂಬ ಒಗೆತ ಅತ್ಯಗತ್ಯ. ಸಾಧಕನಿಗೆ ಸುಜ್ಞಾನ, ಸತ್ಕ್ರಿಯೆ ಕೊಂಚ ಕಡಿಮೆಯಾದರೂ ಚಿಂತೆಯಿಲ್ಲ. ಸದ್ಭಕ್ತಿ ಎಂಬ ನೀರು ಅತ್ಯಗತ್ಯ ಎಂಬುದು ಧರ್ಮಪಿತರ ಅಭಿಪ್ರಾಯ.





803. ಶರಣರು ವ್ಯಸನ ಗೆಲಿದವರು.

ಮುನ್ನೂರರುವತ್ತು ನಕ್ಷತ್ರಕ್ಕೆ ಬಾಯಿಬಿಟ್ಟುಕೊಂಡಿಪ್ಪುದೆ ಸಿಂಪು?
ಅದು ಸ್ವಾತಿಗಲ್ಲದೆ ಬಾಯ್ದೆರೆಯದು ಕೇಳು, ಕೇಳಾ, ತಂದೆ.
ಎಲ್ಲವಕ್ಕೆ ಬಾಯ ಬಿಟ್ಟಡೆ ತಾನೆಲ್ಲಿಯ ಮುತ್ತಪ್ಪುದು?
ಪರಮಂಗಲ್ಲದೆ ಹರುಷತಿಕೆಯಿಲ್ಲೆಂದು
ಕರಣಾದಿ ಗುಣಂಗಳ ಮರೆದರು,
ಇದು ಕಾರಣ, ಲಿಂಗದೇವನ ಶರಣರು ಸಪ್ತವ್ಯಸನಿಗಳಲ್ಲಾಗಿ. –ಬವದೀ. 805

ಕಪ್ಪೆ ಚಿಪ್ಪು ಸಮುದ್ರದಲ್ಲಿ ತೇಲುತ್ತ ಇರುತ್ತದೆ. ಸ್ವಲ್ಪವೇ ಬಾಯಿಬಿಟ್ಟುಕೊಂಡಿರುತ್ತದೆ. ಸ್ವಾತಿ ನಕ್ಷತ್ರದ ಮಳೆ ಹನಿ ಬೀಳುತ್ತಲೇ ಕಪ್ಪೆ ಚಿಪ್ಪು ಕೆಳಗಿಳಿಯುತ್ತದೆ. ಸ್ವಾತಿ ಹನಿಯೇ ಪ್ರೇರಕವಾಗಿ ಸುಂದರವಾದ ಮುತ್ತು ತಯಾರಾಗುತ್ತದೆ' ಎಂಬ ಸಾಂಪ್ರದಾಯಿಕ ನಂಬಿಕೆಯುಂಟು. ಈ ಉಪಮೆಯನ್ನು ಬಳಸಿಕೊಂಡು ಗುರು ಬಸವಣ್ಣನವರು ಹೇಳುತ್ತಾರೆ. "ಮುನ್ನೂರು ಅರವತ್ತು ನಕ್ಷತ್ರಕ್ಕೆ ಕಪ್ಪೆ ಚಿಪ್ಪು ಬಾಯಿಬಿಟ್ಟುಕೊಂಡು ಕಾಯುವುದಿಲ್ಲ. ಅದು ಸ್ವಾತಿಯ ಬಿಂದುವಿಗಾಗಿ ಹಂಬಲ ತುಂಬಿ ಕಾಯುತ್ತದೆ. ಪರಮಾತ್ಮನ ಹೊರತಾಗಿ ಸಂತೋಷ ಸಿಗದೆಂದು ಶರಣರು ಅವನ ಅನುಗ್ರಹದ ಹನಿಗಾಗಿ ಕಾಯುವರು." ಆ ಅನುಗ್ರಹ ದೊರಕಬೇಕಾದರೆ ಇಂದ್ರಿಯ ಗುಣಗಳನ್ನು ಮರೆಯಬೇಕು ಎಂದು ಭಾವಿಸುವರು. ಲಿಂಗದೇವನ ಪ್ರೇಮಕ್ಕೆ ಪಾತ್ರರಾಗಲು ಸಪ್ತ ವ್ಯಸನಗಳನ್ನು ದೂರವಿಡುವರು. ಸಪ್ತ ವ್ಯಸನಗಳು ಯಾವುವೆಂದರೆ ತನು ವ್ಯಸನ, ಮನ ವ್ಯಸನ, ಧನ ವ್ಯಸನ, ರಾಜ್ಯ ವ್ಯಸನ, ಉತ್ಸಾಹ ವ್ಯಸನ, ಸೇವಕ ವ್ಯಸನ, ಸ್ತ್ರೀವ್ಯಸನ ಇನ್ನೊಂದು ಬಗೆಯ ವಿವರಣೆ ಹೀಗಿದೆ. ಬೇಟೆ, ಜೂಜು, ಹಗಲು ನಿದ್ರೆ, ಪರನಿಂದೆ, ಸ್ತ್ರೀಲಾಲಸೆ, ಮದ್ಯಪಾನ ನೃತ್ಯಗಾನಾವಾದನಭಿರುಚಿ.

804. ಲಿಂಗದೇವನ ಕಾವಲು.

ಮೈಗೆ ಕಾಹ ಹೇಳುವರಲ್ಲದೆ, ಮನಕ್ಕೆ ಕಾಹ ಹೇಳುವರೆ?
ಅಣಕದ ಮಿಂಡನ ಹೊಸ ಪರಿಯ ನೋಡಾ!
ಲಿಂಗದೇವನೆನ್ನ ಮನವ ನಂಬದೆ
ತನ್ನಲ್ಲಿದ್ದ ಲೇಸ ಕಾಹ ಹೇಳಿದನು! –ಬವದೀ. 806

ಶರೀರಕ್ಕೆ ರಕ್ಷಣೆ ಕೊಡಲು ಹೇಳುವರಲ್ಲದೆ ಮನಸ್ಸಿಗೆ ರಕ್ಷಣೆ ಕೊಡಲು ಯಾರಾದರೂ ಹೇಳುವರೆ? (ಶರೀರಕ್ಕೆ ಕಾವಲು ಹಾಕಬಹುದಲ್ಲದೆ ಮನಸ್ಸಿಗೆ ಕಾವಲು ಹಾಕಲು ಬರುವುದೆ? ಅದು ಚಂಚಲ ಸ್ವಭಾವದ್ದು.) ಅಣಕದ ಮಿಂಡನಾದ ಲಿಂಗದೇವನು ಸಾಧಕನ ಚಂಚಲ ಸ್ವಭಾವದ ಮನಸ್ಸನ್ನು ನಂಬದೆ ತನ್ನೊಳಗೆ ಅಂತರ್ಗತವಾಗಿರುವ ಒಳ್ಳೆಯತನವನ್ನು ಸಾಧಕನ ಮನಸ್ಸನ್ನು ಕಾಯಲು ಬಿಟ್ಟಿದ್ದಾನೆ. ಇದರ ಅಂತರಾರ್ಥವೇನೆಂದರೆ "ನನ್ನಲ್ಲಿ ಆ ಸ್ಥಿರತೆ, ನಿಷ್ಠೆ ಇದೆಯೋ ಇಲ್ಲವೋ ನಾನರಿಯೆ. ಆದರೆ ನನ್ನ ವಿಷಯದಲ್ಲಿ ದೇವರೇ ಕಾಳಜಿ ವಹಿಸಿ ತನ್ನ ಒಳ್ಳೆಯತನವನ್ನು ನನ್ನ ರಕ್ಷಣೆಗೆ ಇಟ್ಟಿದ್ದಾನೆ."

805. ಮನ ವಂಚನೆ ಸಲ್ಲದು.

ಮನ ವಂಚನೆಯೆ ಅನ್ಯ ಲಿಂಗಾರ್ಚನೆ.
ಅದು ನಿಜವಲ್ಲ ನಿಜವಲ್ಲ,
ಲಿಂಗದೇವನು ಮನದಂತರ್ಯಾಮಿ ತಾನಾಗಿ. –ಬವದೀ. 807

ತನ್ನ ಇಷ್ಟಲಿಂಗವನ್ನು ಬಿಟ್ಟು ಅನ್ನ ಲಿಂಗವನ್ನು (ಅನ್ಯ ದೇವತೆಯನ್ನು) ಪೂಜಿಸುವುದು ಲಿಂಗಾಯತ ಧರ್ಮದ ಪ್ರಕಾರ ಅಪರಾಧ. ಆದರೆ ಮನ ವಂಚನೆ ಅದಕ್ಕೂ ಮಿಕ್ಕಿದ ಅಪರಾಧ. ಶರಣನಾದವನು ತನ್ನ ಮನಸ್ಸನ್ನು ಎಂದೂ ವಂಚಿಸಿಕೊಳ್ಳಬಾರದು. ಏಕೆಂದರೆ ಲಿಂಗದೇವನು ಮನದ ಅಂತರ್ಯಾಮಿಯಾಗಿ ಒಳಗೆ ಕುಳಿತು ಎಲ್ಲವನ್ನೂ ನೋಡುತ್ತಿರುವನು. ತನ್ನ ಒಳಧ್ವನಿಗೆ ವಿರುದ್ಧವಾಗಿ ಎಂದೂ ನಡೆಯಬಾರದು.

**806. ಲಿಂಗಾಂಗ ಸಾಮರಸ್ಯ.**

ಸರ್ಪನ ಸಂಯೋಗ, ಜ್ಯೋತಿಯ ಪತಂಗನ ಬೆಸನದಂತೆ:
ಮನದ ಮದವರಿಯದೆ ನಿಮ್ಮ ಕೃಪೆಯಿಂದೆ ನಿಮ್ಮ ನೆನೆವೆ.
ಎನ್ನ ಭಾವದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪೆಯಯ್ಯಾ,
ಲಿಂಗದೇವಾ, ನೀನೆನ್ನ ಪ್ರಾಣನಾಥನಾಗಿ. –ಬವದೀ. 808

ಲಿಂಗಾಂಗ ಸಾಮರಸ್ಯದ ತುರೀಯ ಆನಂದವನ್ನು ಅನುಭವಿಸಿ ಆ ತನ್ಮಯತೆಯಲ್ಲಿ ಈ ವಚನವನ್ನು ಗುರು ಬಸವಣ್ಣನವರು ಬರೆದಿದ್ದಾರೆ. ಎರಡು ಸರ್ಪಗಳು ಸಂಯೋಗ ಕಾಲದಲ್ಲಿ ಒಂದನ್ನೊಂದು ಸುತ್ತಿಕೊಂಡು ಹೊರಗಿನ ಜಗತ್ತಿನ ಪರಿವೆ ಇಲ್ಲದಂತೆ ಇರುತ್ತವೆ. ಉರಿಯುವ ಜ್ಯೋತಿಯನ್ನು ತಾಕಿದ ಪತಂಗ ಅಲ್ಲೆ ಸುಟ್ಟು ಬೂದಿಯಾಗುವುದು. ಅದೇ ರೀತಿ ಅಹಂಕಾರವನ್ನು ಕಳೆದುಕೊಂಡು, ಪ್ರತ್ಯೇಕತೆಯನ್ನು ಇಲ್ಲವಾಗಿಸಿಕೊಂಡು ಮನಸ್ಸು ಲಿಂಗದೇವನನ್ನು ನೆನೆಯುತ್ತಲಿದೆ. ಈ ಸ್ಥಿತಿ ಸಾಧ್ಯವಾಗುವುದು. ಸಹ ದೇವನ ಕೃಪೆಯಿಂದಲೇ ! ಭಾವೇಂದ್ರಿಯ ಎಲ್ಲಕ್ಕೂ ಸೂಕ್ಷ್ಮ ಇಂದ್ರಿಯ. ಇದರ ಸ್ಥಾನ ಹೃದಯ. ದೇವನನ್ನು ಅನುಭವಿಸುವ ಇಂದ್ರಿಯ ಭಾವ. ಅದರ ಕೊನೆಯ ಮೊನೆಯ ಮೇಲೆ ಲಿಂಗದೇವನು ನೆಲೆಸಿರುವನು. ಏಕೆಂದರೆ ಅವನೇ ಸಾಧಕನ (ಗುರು ಬಸವಣ್ಣನವರ) ಪ್ರಾಣನಾಥ.

**807. ದಿವ್ಯಾನುಭವ**

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ನಿರಂಜನದೇವಾ;
ನಿಮ್ಮ ಮಹಿಮೆಯ ಕಾಣಲಾರಿಗೆಯೂ ಬಾರದಯ್ಯಾ.
ಜ್ಞಾನಜ್ಯೋತಿ ಧ್ಯಾನದಿಂದ ನಾಳಶುದ್ಧ ದ್ವಾರನಾಗಿ
ಆರಾಧಿಸಿ ಕಂಡೆ ನಿಮ್ಮ ಲಿಂಗದೇವ. –ಬವದೀ. 809

ಈ ಜಗತ್ತು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳೆಂಬ ಪಂಚ ಭೂತಗಳಿಂದ ಆಗಿದೆ. ಇದರ ಸೂತ್ರಧಾರ ನಿರಂಜನ ಸ್ವರೂಪನಾದ ಪರಮಾತ್ಮ. ಇಂಥ ಪರಮಾತ್ಮನ ಮಹಿಮೆ ಎಲ್ಲೆಡೆಯಲ್ಲಿ ಅಭಿವ್ಯಕ್ತವಾಗುತ್ತಿದ್ದರೂ ಅರಿತುಕೊಳ್ಳುವವರು ಕಡಿಮೆ. ಆದರೆ ಗುರು ಬಸವಣ್ಣನವರು ಜ್ಞಾನಕೇಂದ್ರವಾದ ಆಜ್ಞಾಚಕ್ರದಲ್ಲಿ ದೃಷ್ಟಿ ನೆಟ್ಟು ಧ್ಯಾನಿಸಿ ಜೊತೆಗೆ ಸುಷುಮ್ನಾ ನಾಳವನ್ನು ತೆರೆದುಕೊಂಡು ಕುಂಡಲಿನಿ ಶಕ್ತಿಯನ್ನು ಊರ್ಧ್ವಮುಖವಾಗಿ ಏರಿಸಿ ಲಿಂಗದೇವನ ಸಾಮರಸ್ಯದ ದಿವ್ಯಾನುಭವವನ್ನು ಪಡೆಯುತ್ತಲಿದ್ದಾರೆ.

**808. ಲಿಂಗದೇವನು ಹಿಡಿವಡೆದ.**

ಪಶ್ಚಿಮಪದ್ಮಾಸನದಲ್ಲಿ ಕುಳಿತು ನೆಟ್ಟೆಲುವ ಮುರಿದು
ತುಟಿ ಮಿಡುಕದೆ ಅಟ್ಟೆಯಾಡಿತ್ತಲ್ಲಾ!
ಬಿಟ್ಟ ಕಣ್ಣು ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ
ಕಟ್ಟು ಗುಡಿಯ ಲಿಂಗದೇವ ಹಿಡಿವಡೆದ ! –ಬವದೀ. 810

ಪಶ್ಚಿಮ ದಿಕ್ಕಿಗೆ ಮುಖ ಮಾಡಿ, ಪದ್ಮಾಸನದಲ್ಲಿ ಕುಳಿತು ಬೆನ್ನು ಹುರಿಯನ್ನು ನೆಟ್ಟಗೆ ಇರಿಸಿಕೊಂಡು ಕಣ್ಣೆವೆಗಳಾಗಲಿ, ತುಟಿಯಾಗಲಿ ಮಿಡುಕದೆ ಉಸಿರು ಒಳಗೆ ಹೊರಗೆ ಸಂಚರಿಸುತ್ತಿದೆ. ಕಣ್ಣುಗಳು ತೆರೆದಿವೆ. ಹುಬ್ಬು ಬಿಗಿದುಕೊಂಡಿವೆ. (ಎರಡೂ ಕಣ್ಣು ಗುಡ್ಡೆಗಳನ್ನು ಕಣ್ಣಿನ ತುದಿಗೆ ತಂದು ಮೇಲಕ್ಕೆತ್ತಿದರೆ ಅದು ಆಜ್ಞಾ ಚಕ್ರ-ಭ್ರೂಮಧ್ಯಕ್ಕೆ ನಿಲ್ಲುತ್ತದೆ. ಕೆಳಕ್ಕೆ ಇಳಿಸಿದರೆ ಹೃದಯ ಕಮಲ-ಅನಾಹತ ಚಕ್ರಕ್ಕೆ ನಿಲ್ಲುತ್ತದೆ. ಜ್ಞಾನಯೋಗಿಗಳು ಭ್ರೂಮಧ್ಯೆ, ಭಕ್ತಿ ಯೋಗಿಗಳು ಹೃದಯ ಕಮಲದಲ್ಲಿ ದೃಷ್ಟಿ ನಿಲ್ಲಿಸುತ್ತಾರೆ) ಬ್ರಹ್ಮರಂಧ್ರವಾದ ಆಜ್ಞಾ ಚಕ್ರದಲ್ಲಿ ದೃಷ್ಟಿ ನಿಲ್ಲಿಸಬೇಕು. ಆಗ ಲಿಂಗದೇವನು ಬಿಗಿದಪ್ಪಿಕೊಂಡ ದಿವ್ಯಾನುಭವ ಉಂಟಾಗುವುದು.






**809. ಲಿಂಗದೇವನ ಕೂಟ**

ಸುನಾದ ಬಿಂದು ಪ್ರಣವಮಂತ್ರದಗ್ರದ ಕೊನೆಯಲ್ಲೈದುವುದೆ?
'ಸೋಹಂ ಸೋಹಂ' ಎಂದೆನುತ್ತಿದ್ದಿತ್ತು,
'ಕೋಹಂ' ಎಂಬುದ ಕಳೆದು ಬ್ರಹ್ಮರಂಧ್ರದೊಳಗೆ.
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನ'
ಇಂತೆಂದುದಾಗಿ,
ಲಿಂಗದೇವನಲ್ಲದೆ ಮತ್ತಾರೂ ಇಲ್ಲ! –ಬವದೀ. 811

ಸಾಧನೆಯ ಹಾದಿಯಲ್ಲಿ ಸಾಗಿದ ಸಾಧಕನಿಗೆ ಮೊಟ್ಟ ಮೊದಲನೆಯ ಅನುಭವ 'ನಾದ'ದ ಕೇಳುವಿಕೆ. ಅನಾಹತ ಚಕ್ರ-ಹೃದಯ ಕಮಲದಲ್ಲಿ ವಿಶಿಷ್ಟವಾದ ಓಂಕಾರ ನಾದವು ಕೇಳಿಬರುತ್ತದೆ. ನಂತರ ಬಿಂದು-ಜ್ಯೋತಿಯ ದರ್ಶನವಾಗುತ್ತದೆ. ಪ್ರಣವ ಮಂತ್ರದ ಸಾಧನೆಯನ್ನು ಎಡೆಬಿಡದೆ ಹಾಗೆಯೇ ಮುಂದುವರಿಸಿದಾಗ ಅದರ ಕೊನೆಯಲ್ಲಿ ಆಗುವುದು ಲಿಂಗದೇವನ ದಿವ್ಯಾನುಭವ. ಆ ಅನುಭವ ಆಗುವಾಗ 'ಸ ಅಹಂ' (ಸೋಹಂ) ಅಂದರೆ ಆ ಚೈತನ್ಯವೇ ನಾನು ಎಂಬ ಭಾವ ಉಂಟಾಗುವುದು. ಈ ಮೊದಲಿಗೆ 'ಕ ಅಹಂ' (ಕೋಹಂ) ನಾನು ಯಾರು ? ಎಂಬ ಪ್ರಶ್ನೆ ಎದ್ದು 'ಹುಡುಕಾಟ' ಸಾಗಿತ್ತಲ್ಲ. ಅದೀಗ ನಿಂತು ಹೋಗುತ್ತದೆ. ಬ್ರಹ್ಮರಂಧ್ರದೊಳಗೆ ದೃಷ್ಟಿಯನ್ನಿಟ್ಟು ನೋಡುತ್ತಲೇ ಅಗಮ್ಯನಾದ ಲಿಂಗದೇವನ ಅನುಭವ ಪ್ರಾಪ್ತಿಯಾಗುತ್ತದೆ. ವಾಙ್ಮನಾತೀತವಾಗಿರುವ ಪರಮಾತ್ಮನು ಆನಂದ ಬ್ರಹ್ಮನು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಆನಂದದ ಮಹಾಪೂರವನ್ನೇ ಹರಿಸಿದವನು ಲಿಂಗದೇವನೇ ಅಹುದು.

**810. ಸಹಸ್ರಾರ ವಾಸ.**

ಬೆಳಗಿನೊಳಗಣ ಬೆಳಗು ಮಹಾಬೆಳಗು !
ಶಿವ ಶಿವಾ, ಪರಮಾಶ್ರಯವೇ ತಾನಾಗಿ
ಶತಪತ್ರಕಮಳಕರ್ಣಿಕಾಮಧ್ಯದಲ್ಲಿ
ಸ್ವತಃಸಿದ್ಧನಾಗಿಪ್ಪ ನಮ್ಮ ಲಿಂಗದೇವ. –ಬವದೀ. 812

ಪರಮಾತ್ಮನು ಪ್ರಕಾಶ ಸ್ವರೂಪನು. ಅವನ ಅನುಭವ ಆನಂದ (Bliss)ವನ್ನು ನೀಡಿದರೆ ಅವನು ಗೋಚರವಾಗುವುದು ಬೆಳಕಿನ (Light)ರೂಪದಲ್ಲಿ. ಹೀಗಾಗಿ ದೇವನು ಮಹಾಬೆಳಗು. ಆನಂದೋನ್ಮಾದದಿಂದ ಗುರು ಬಸವಣ್ಣನವರು ಇಲ್ಲಿ "ಶಿವಶಿವಾ" ಎಂಬ ಪದ ಪ್ರಯೋಗ ಮಾಡಿದ್ದಾರೆ. ಪರಮಾತ್ಮನ ಪರಮ ಆಶ್ರಯ ನೆತ್ತಿಯಲ್ಲಿರುವ ಸಹಸ್ರಾರ ಚಕ್ರದಲ್ಲಿ ಸ್ವತಃ ನೆಲೆಸಿದ್ದಾನೆ. ಹೊಕ್ಕುಳದ ಮೇಲಿನ ಊರ್ಧ್ವ ಚಕ್ರಗಳಾದ ಅನಾಹತ, ಆಜ್ಞಾ ಇವುಗಳು ದೇವನ ನೆಲೆಗಳಾಗಿದ್ದರೂ ಶತಪತ್ರ ಎನ್ನಿಸಿಕೊಳ್ಳುವ ಸಹಸ್ರಾರದಲ್ಲಿ ದೇವನ ಇರುವಿಕೆ ಘನೀಭೂತವಾಗಿರುತ್ತದೆ. ಅದನ್ನು ಈಗ ಗುರು ಬಸವಣ್ಣನವರು ಅನುಭವಿಸುತ್ತಿದ್ದಾರೆ.

**811. ಶರಣರ ದಾರಿ ವಿಶಿಷ್ಟ.**

ಆಚಾರ ಶಿವಾಚಾರವೆಂದರಿಯದ ಕಾರಣ,
ಷಡುದರುಶನಂಗಳೆಲ್ಲಾ ತಮತಮಗೆ ಶರಣೆನ್ನುತ್ತಿದ್ದುವು.
ಮಹತ್ವದ ಸಮಯಾದಿ ಶೈವಂಗಳೆಂಬುವೆಲ್ಲ, ಶರಣು ಶರಣೆನ್ನುತ್ತಿದ್ದುವು.
ನಮ್ಮ ಲಿಂಗದೇವನ ಶರಣರು ಮಾಡಿದ ವಿನಿಯೋಗ
ಬಹಿರಂಗದಲ್ಲಿ ವರ್ತಿಸುವವರಿಗೆ ಎಲ್ಲಿಯದೊ? –ಬವದೀ. 813

ನಿಜವಾದ ಧರ್ಮ ಮಾರ್ಗ ಲಿಂಗಾಯತ ಧರ್ಮದ ಶಿವಾಚಾರದಲ್ಲಿದೆ. ಏಕೆಂದರೆ ಇದು ಈ ಮರ್ತ್ಯಲೋಕದಲ್ಲಿ ಹೇಗೆ ಬದುಕಬೇಕೆಂಬುದನ್ನು ಕಲಿಸುತ್ತದೆ. ಇದನ್ನರಿಯದೆ ಷಡುದರ್ಶನಗಳು ತಾವೇ

ದೊಡ್ಡವು ಎಂಬಂತೆ ವರ್ತಿಸುತ್ತಿವೆ. ತಮಗೆ ತಾವೇ ಶ್ರೇಷ್ಠವೆಂದು ಹೊಗಳಿಕೊಳ್ಳುತ್ತವೆ. ಆದರೆ ಅನೇಕ ಪ್ರಭಾವಶಾಲಿ ಶೈವ ಪಂಥಗಳು ಲಿಂಗಾಯತ ಧರ್ಮದ ಶಿವಾಚಾರ(ಸಾಮಾಜಿಕ-ಧಾರ್ಮಿಕ ಸಮಾನತೆ)ಕ್ಕೆ ಮಾರುಹೋಗಿ ಶರಣು ಶರಣೆನ್ನುತ್ತ ಶರಣಾಗುತ್ತಿವೆ. ನಮ್ಮ ಲಿಂಗದೇವನ ಶರಣರು ಮಾಡುವ ಆಚರಣೆ, ವಿಚಾರ, ತೋರುವ ನಡೆ-ನುಡಿ ಬಹಿರಂಗದಲ್ಲಿ ವಾಚಾಳಿಗಳಾದ ಅನ್ಯರಿಗೆ ಎಲ್ಲಿ ಬರಲು ಸಾಧ್ಯ.?!

**812.** ಬಚ್ಚ ಬರಿಯ ಬಸವ.

ತಮತಮಗೆಲ್ಲ ನೊಸಲಕಣ್ಣವರು, ತಮತಮಗೆಲ್ಲ ನಂದಿವಾಹನರು,
ತಮತಮಗೆಲ್ಲ ಖಟ್ವಾಂಗಕಪಾಲತ್ರಿಶೂಲಧರರು
ದೇವರಾರು? ಭಕ್ತರಾರು, ಹೇಳಿರಯ್ಯಾ!
ಲಿಂಗದೇವಾ, ನಿಮ್ಮ ಶರಣರು ಸ್ವತಂತ್ರ ಧೀರರು
ಎನ್ನ ಬಚ್ಚಬರಿಯ ಬಸವನೆನಿಸಯ್ಯಾ. –ಬವದೀ. 814

ಅನೇಕರು ತಾವು ಸಾಕ್ಷಾತ್ ಶಿವನ ಅವತಾರಿಗಳು ಎಂದು ತೋರಿಸಿಕೊಳ್ಳಲು ವಿವಿಧ ವೇಷಗಳನ್ನು ಹಾಕುತ್ತಿದ್ದರು. ಶಿವನಿಗೆ 3ನೆಯ ಕಣ್ಣಿತ್ತು ಎಂಬ ಪೌರಾಣಿಕ ಕಲ್ಪನೆಯಂತೆ ಹಣೆಯ ಮೇಲೆ ಒಂದು ಕಣ್ಣನ್ನು ಬರೆದುಕೊಳ್ಳುತ್ತಿದ್ದರು ಮತ್ತೆ ಕೆಲವರು ನಂದಿಯನ್ನು ವಾಹನವನ್ನಾಗಿ ಮಾಡಿಕೊಂಡು ಸಂಚರಿಸುತ್ತಿದ್ದರು. ಇನ್ನು ಕೆಲವರು ಕೈಯಲ್ಲಿ ಖಟ್ವಾಂಗ ಎಂಬ ಆಯುಧ, ತ್ರಿಶೂಲವೆಂಬ ಆಯುಧ ಇರಿಸಿಕೊಂಡು ತಾವು ಶಿವನ ಅವತಾರಿಗಳೆಂದು ಪ್ರದರ್ಶಿಸಿಕೊಳ್ಳುತ್ತಿದ್ದರು. ಹೀಗಾಗಿ ಎಲ್ಲರೂ ದೇವರುಗಳೇ! ಇವರಲ್ಲಿ ಭಕ್ತರಾಗಿ ದೇವರನ್ನು ಪೂಜಿಸುವವರಾರು ಹೇಳಿರಯ್ಯ ಎಂದು ಗುರು ಬಸವಣ್ಣನವರು ವ್ಯಂಗ್ಯವಾಗಿ ಕೇಳುತ್ತಿದ್ದಾರೆ. ಆದರೆ ನಮ್ಮ ಶರಣರು ಇಂಥ ಅಸಹಜ, ವಿಚಿತ್ರ ವೇಷ ಧರಿಸುವವರಲ್ಲ. ಜನರ ಮುಂದೆ ಆಡಂಬರ ಪ್ರದರ್ಶಿಸುವವರಲ್ಲ. ಹೆದರಿಸುವವರು ಮೊದಲೇ ಅಲ್ಲ. "ದೇವಾ, ನನಗೆ ಯಾವ ವೇಷವೂ ಬೇಡ, ಬಿರುದೂ ಬೇಡ- ನನ್ನನ್ನು ಬಚ್ಚಬರಿಯ ಬಸವನೆನಿಸು ಸಾಕು" ಎಂದು ಲಿಂಗದೇವನಲ್ಲಿ ಬೇಡುತ್ತಾರೆ. ಈ ವಚನದಿಂದ ಗುರು ಬಸವಣ್ಣನವರು ಎಂಥಾ ಸರಳ ಜೀವಿಗಳು ಎಂಬುದು ಮನವರಿಕೆಯಾಗುತ್ತದೆ.

**813.** ಲಿಂಗದಲ್ಲಿ ಅನುದಿನ ವೇಳೆ.

ಗುರುವಿನಲ್ಲಿ ಸದಾಚಾರ: ಲಿಂಗದಲ್ಲಿ ಅನುದಿನ ವೇಳೆ,
ಜಂಗಮದಲ್ಲನುಭಾವ, ಸಮಯಾಚಾರ: ಲಿಂಗದಲ್ಲಿ ಅನುದಿನ ವೇಳೆ.
ಈ ಉಭಯಾಚಾರದಿಂದ ತಿಳಿದ ತಿಳಿವು ಲಿಂಗದಲ್ಲಿ ಅನುದಿನ ವೇಳೆ.
ಬೇರೆ ತೋರಲಿಲ್ಲ-
ಲಿಂಗಜಂಗಮದಲ್ಲಿ ಲೀಯವಾದ ಸಮಯಾಚಾರ,
ಇದು ಕಾರಣ ಲಿಂಗದೇವಾ,
ಲಿಂಗದಲ್ಲಿ ಅನುದಿನ ವೇಳೆ. –ಬವದೀ. 815

ಲಿಂಗಧ್ಯಾನದಲ್ಲಿ ಇಡೀ ದಿನವನ್ನು ಕಳೆಯಬೇಕು. ಹಗಲು ನಾಲ್ಕು ಜಾವ, ಇರುಳು ನಾಲ್ಕು ಜಾವ ಲಿಂಗದೇವನ ಧ್ಯಾನವನ್ನೇ ಪ್ರಾಣವಾಗಿ ಮಾಡಿಕೊಳ್ಳಬೇಕು. ಇದು ಲಿಂಗಾಯತ ಧರ್ಮ ವಿಧಿಸುವ ಶಾಸನ. ಇದರರ್ಥ ನಾವು ಕೇವಲ ಲಿಂಗಪೂಜೆ ಮಾಡುತ್ತ ಕಾಲಕಳೆಯಬೇಕು ಎಂದೆ? ಇಲ್ಲ. ಸದಾಚಾರ ಸಂಪನ್ನನಾಗಿರುವುದು ದೀಕ್ಷಾಗುರುವಿಗೆ ಸಲ್ಲಿಸುವ ಗೌರವ. ಏಕೆಂದರೆ ದೀಕ್ಷಾಗುರು ದೀಕ್ಷೆಯನ್ನು ಕೊಡುವಾಗ ಶಿಷ್ಯನಿಗೆ ಸದಾಚಾರ ಸಂಪನ್ನನಾಗಿರುವಂತೆ ಬೋಧಿಸಿರುವರು. ಜಂಗಮವು ಲಭ್ಯವಾದಾಗ ಕ್ಷಣವನ್ನೂ ವ್ಯರ್ಥಮಾಡಿಕೊಳ್ಳದೆ ಅನುಭಾವ ಗೋಷ್ಠಿ ಮಾಡಬೇಕು ಮತ್ತು ಸಮಯಾಚಾರದ ಮೂಲಕ ಅವರಿಗೆ ಗೌರವ, ಸೇವೆ ಸಲ್ಲಿಸಬೇಕು. ಸಮಾಯಾಚಾರ ಎಂದರೆ ಆಯಾಯ ಸಮಯದಲ್ಲಿ ಸಲ್ಲಿಸಬೇಕಾದ ಉಪಚಾರ. ಅದೇ ಲಿಂಗಪೂಜೆಯಾಗುವುದು. ಗುರು ಜಂಗಮರಲ್ಲಿ ತೋರುವ ಭಕ್ತಿ ಸಮಯಾಚಾರ. ಇದೂ ಲಿಂಗದ ಪೂಜೆಯೇ ಇದ್ದಂತೆ.





**814.** ದೇಹವೇ ದೇಗುಲ

ಉಳ್ಳವರು ಶಿವಾಲಯ ಮಾಡುವರು ;
ನಾನೇನ ಮಾಡುವೆ ಬಡವನಯ್ಯಾ. ?
ಎನ್ನ ಕಾಲೇ ಕಂಭ, ದೇಹವೇ ದೇಗುಲ,
ಶಿರವೆ ಹೊನ್ನ ಕಲಶವಯ್ಯಾ.
ಲಿಂಗದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ! –ಬವದೀ. 816

ತುಂಬಾ ಜನಪ್ರಿಯವಾದ ಪ್ರಸಿದ್ಧ ವಚನಗಳಲ್ಲಿ ಇದೂ ಒಂದು. ಹಲವು ದಿಕ್ಕಿನಿಂದ ಈ ವಚನವನ್ನು ಅರ್ಥೈಸಲು ಬರುತ್ತದೆ. ಗುರು ಬಸವಣ್ಣನವರು ವ್ಯಂಗ್ಯವಾಗಿ ಹೀಗೆ ಏಕೆ ಹೇಳಿರಬಾರದು? ಉಳ್ಳವರು ಶಿವಾ, ಲಯವ ಮಾಡುವರು ; ನಾನೇನ ಮಾಡುವೆ ಬಡವನಯ್ಯಾ ? ಸಮಾಜದಲ್ಲಿ ಉಳ್ಳವರು-ಅಧಿಕಾರ ಉಳ್ಳವರು, ಹಣ ಉಳ್ಳವರು, ವಿದ್ಯೆ ಉಳ್ಳವರು ಅನೇಕ ಅನಾಹುತಗಳನ್ನು ಮಾಡುವರು. ದೀನರು ಶೋಷಣೆಗೆ ಒಳಗಾಗುವರೇ ವಿನಾ ಶೋಷಕರಾಗುವುದಿಲ್ಲ.

ಗುರು ಬಸವಣ್ಣವರೇನು ಬಡವರಿರಲಿಲ್ಲ. ಮನಸ್ಸು ಮಾಡಿದ್ದರೆ ಬೇಕಾದಷ್ಟು ದೇವಾಲಯಗಳನ್ನು ಕಟ್ಟಬಹುದಿತ್ತು. ಪ್ರಧಾನಿ ಇದ್ದ ಅವರು ಕಟ್ಟಿಸಲೂ ಬಹುದಿತ್ತು. ಇಲ್ಲಿ ಬಡವರ ಪರವಾಗಿ ಧ್ವನಿ ಎತ್ತುತ್ತಾರೆ. ಧನ ಉಳ್ಳವರು ದೇವಾಲಯಗಳನ್ನು ಕಟ್ಟಿ ತಾವು ಪುಣ್ಯಜೀವಿಗಳೆಂದು ಹೆಮ್ಮೆಪಡುತ್ತಾರೆ. ತಮಗೆ ಅದು ಸಾಧ್ಯವಾಗಲಿಲ್ಲವೆಂದು ಬಡವರು ಉಸಿರ್ಗರೆಯುತ್ತಾರೆ. ಗುರು ಬಸವಣ್ಣವರ ದೃಷ್ಟಿಯಲ್ಲಿ ಅನ್ಯಾಯ ಮಾರ್ಗದಿಂದ ಹಣ ಗಳಿಸಿ ಗುಡಿ ಕಟ್ಟಿಸುವವರಿಗಿಂತಲೂ ಪ್ರಾಮಾಣಿಕ ಬದುಕು ಬದುಕುವವ ಪುಣ್ಯಜೀವಿ. ಆದ್ದರಿಂದ ದೀನರಾದ ಬಡವರಿಗೆ ಆಶ್ವಾಸನೆ ನೀಡುತ್ತಾರೆ. "ಉಳ್ಳವರು ಶಿವಾಲಯಗಳನ್ನು ಮಾಡುವರು, ನಾನೇನು ಮಾಡಬಲ್ಲೆ ಬಡವ?" ಎಂದು ನಿರಾಶನಾಗಬೇಡ. ದೇವರು ಕೊಟ್ಟ ವರ ಮಾನವ ಜನ್ಮ. ದೇಹವೇ ಒಂದು ದೊಡ್ಡ ಸಂಪತ್ತು. ಈ ದೇಹವನ್ನೇ ದೇವಾಲಯವಾಗಿ ಮಾಡಿಕೊಳ್ಳಲು ಬರುತ್ತದೆ. "ಕಾಲು ಕ್ರಿಯಾಂಗ, ಸದಾಚಾರದ ಕಂಭದ ಮೇಲೆ ಜೀವನದ ದೇವಾಲಯ ನಿಲ್ಲಬೇಕು. ಇದಕ್ಕೆ ಸ್ವತಂತ್ರ ಬುದ್ಧಿಶಕ್ತಿಯ ಶಿರವೇ ಹೊನ್ನಿನ ಕಳಸವಾಗುತ್ತದೆ. ಲಿಂಗದೇವ ಕೇಳಯ್ಯ, ಸ್ಥಾವರಕ್ಕೆ ನಾಶವಿದೆ. ಜಂಗಮಕ್ಕೆ ನಾಶವಿಲ್ಲ."

ದೇಹ ಸ್ಥಾವರ ಅದಕ್ಕೆ ನಾಶವಿದೆ. ಆತ್ಮ ಜಂಗಮ ಅದಕ್ಕೆ ನಾಶವಿಲ್ಲ. ಜಗತ್ತು ಸ್ಥಾವರ ಅದಕ್ಕೆ ಪ್ರಳಯವಿದೆ. ಜಗದೀಶ ಜಂಗಮ ; ಪರಮಾತ್ಮನಿಗೆ ನಾಶವಿಲ್ಲ. ಅರ್ಥಶಾಸ್ತ್ರ ದೃಷ್ಟಿಯಿಂದ ದುಡ್ಡು ಸ್ಥಾವರ, ದುಡಿತ ಜಂಗಮ. ದುಡ್ಡಿಗೆ ನಾಶವಿದೆ. ದುಡಿತಕೆ ನಾಶವಿಲ್ಲ. ದೇಹವನ್ನು ದೇವಾಲಯ ಮಾಡಿಕೊಂಡವನೇ ನಿಜ ಶರಣ.

**815.** ಮನಃ ಪ್ರೇರಕ.

ಅಷ್ಟದಳಕಮಳಾತ್ಮದೊಳಗೆ
ನೆಟ್ಟನೆ ಮನಃಪ್ರೇರಕನೆಂದು ನಿಮ್ಮ ನಂಬಿದೆ; ಮತ್ತೊಂದನರಿಯದೆ,
ನಿತ್ಯಸ್ವತಂತ್ರನು ನೀನೆ ; ದೃಷ್ಟ ಲಿಂಗ ಜಂಗಮ ಒಂದೆ ಎಂದಿಪ್ಪೆನು.
ಪ್ರಭುವೆ, ಲಿಂಗದೇವಾ. –ಬವದೀ. 817

ಹೃದಯ ಕಮಲವು ಎಂಟು ದಳಗಳಿಂದ ಕೂಡಿದ ಶಕ್ತಿ ಕೇಂದ್ರ. ಜೀವಾತ್ಮವು ದೇಹದಲ್ಲೆಲ್ಲ ಸರ್ವವ್ಯಾಪಿಯಾಗಿ ನೆಲೆಸಿರುವುದಾದರೂ ಅದರ ಸ್ಥಾನ ಹೃದಯ ಕಮಲ. ಹೀಗಾಗಿ ದೇವನು ಹೃದಯ ಕಮಲದಲ್ಲಿ ನೆಲೆಸಿ ನೆಟ್ಟನೆ ಮನಃಪ್ರೇರಕನಾಗಿ ಇರುತ್ತಾನೆ. ಇದನ್ನೇ ಅಂತರಾತ್ಮ ಎನ್ನಲಾಗುವುದು. ಇದಕ್ಕೆ ಒಳದನಿ ಎಂದೂ ಹೆಸರು. ದೇವರು ಮನಃಪ್ರೇರಕ ಎಂದು ಗುರು ಬಸವಣ್ಣನವರು ದೃಢವಾಗಿ ನಂಬಿದ್ದಾರೆ. "ದೇವಾ ನಿತ್ಯನು, ಸ್ವತಂತ್ರನು ನೀನೆ. ನೀನು ನಿರಾಕಾರ. ನಿನ್ನ ಸಾಕಾರ ಸ್ವರೂಪವೇ ಇಷ್ಟಲಿಂಗ ಮತ್ತು ಜಂಗಮ ಎಂದು ನಂಬಿದ್ದೇನೆ. ನಿನ್ನನ್ನು ನಂಬಿದ್ದೇನೆ. ಇಷ್ಟಲಿಂಗದ ಮೂಲಕ ನಿನ್ನನ್ನು ಅರ್ಚಿಸುತ್ತೇನೆ. ಜಂಗಮ ರೂಪಕ್ಕೆ ಸೇವೆ ಸಲ್ಲಿಸುತ್ತೇನೆ."

**816. ಲಿಂಗ ಜಂಗಮವೇ ಸರ್ವಸ್ವ**

ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ?
ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೆ ರೂಪಾದೆ.
ಇನ್ನು ಜಂಗಮವೆ ಲಿಂಗವೆಂದು ನಂಬಿದೆ, ಲಿಂಗದೇವಾ –ಬವದೀ. 818

ಸಾಧಕ ಜೀವಿ ದೇವನಿಗಾಗಿ ಹುಡುಕಾಟ ನಡೆಸುತ್ತಾನೆ. ಮೊದಲು ಹೊರಗೆ ನಂತರ ಮೇಲೆ ; ಆದರೆ ಅಂತಿಮವಾಗಿ ಪರಮ ಸತ್ಯವು ತನ್ನೊಳಗೇ ಇದೆ ಎಂದು ಅರಿತುಕೊಳ್ಳುತ್ತಾನೆ. ಒಳಗೇ ಇರುವ ತನ್ನ ರೂಪ ತೋರಲಿಕ್ಕೆ ದೇವರು ಎಷ್ಟು ದಿನ ಹಿಡಿಸಿದನಲ್ಲ ಎಂದು ಆಶ್ಚರ್ಯವಾಗುತ್ತದೆ. ಅದನ್ನೇ ಈ ವಚನದಲ್ಲಿ ಹೇಳಲಾಗಿದೆ. "ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ ? ಎನ್ನೊಳಗೆ ಇದ್ದೆ. ಆದರೆ ಅಭಿವ್ಯಕ್ತಗೊಳ್ಳಲು ಎರಡು ರೂಪಗಳನ್ನು ತಳೆದೆ." ಒಂದು ಇಷ್ಟಲಿಂಗ ಇನ್ನೊಂದು ಜಂಗಮ. ಇಷ್ಟಲಿಂಗಾನುಸಂಧಾನ, ಜಂಗಮ ದಾಸೋಹ– ಈ ಎರಡರ ಮೂಲಕ ನಿನ್ನನ್ನು ನನ್ನೊಳಗೇ ಪಡೆದುಕೊಂಡೆ" ಎನ್ನುತ್ತಾರೆ ಗುರು ಬಸವಣ್ಣನವರು.

**817. ಜಂಗಮ ಕೋಪ ಸೈರಿಸಲಳವಲ್ಲ.**

ಗುರು ಮುನಿದಡೆ ಒಂದು ದಿನ ತಾಳುವೆ,
ಲಿಂಗ ಮುನಿದಡೆ ದಿನವರೆ ತಾಳುವೆ,
ಜಂಗಮ ಮುನಿದಡೆ ಕ್ಷಣಮಾತ್ರ ತಾಳಿದೆನಾದಡೆ,
ಎನ್ನ ಪ್ರಾಣದ ಹೋಕು ಲಿಂಗದೇವಾ –ಬವದೀ. 819

ಗುರುವು ಕೋಪ ಮಾಡಿಕೊಂಡರೆ ಒಂದು ದಿವಸ ಆ ಮುನಿಸನ್ನು ತಾಳಿಕೊಳ್ಳುತ್ತೇನೆ. ಲಿಂಗದೇವನು ಮುನಿದಡೆ ಅರ್ಧದಿನ ಆ ಮುನಿಸನ್ನು ತಾಳಿಕೊಳ್ಳುತ್ತೇನೆ. ಜಂಗಮ ಮುನಿದಡೆ ಒಂದು ಕ್ಷಣ ಸಹ ತಾಳಿಕೊಳ್ಳುವುದಿಲ್ಲ. ಮುನಿಸಿನ ಕಾರಣವನ್ನು ತಿಳಿದು ಸಮಾಧಾನ ಪಡಿಸಲು ಯತ್ನಿಸುತ್ತೇನೆ. ಇಲ್ಲದಿದ್ದರೆ ನನ್ನ ಪ್ರಾಣವೇ ಹೋಗುತ್ತದೆ. ಜಂಗಮ ಪದಕ್ಕೆ ವಿವಿಧಾರ್ಥಗಳುಂಟು. ಜಂಗಮ ಅಂದರೆ ಒಂದು ಅರ್ಥ ಸಹ ಧರ್ಮಿ. ಸಹ ಧರ್ಮಿ ಶರಣನು ಮುನಿಸಿಕೊಂಡರೆ ಹೋಗಲಿ ಬಿಡು ಎಂದು ಉದಾಸೀನ ತಾಳಬಾರದು. ತಕ್ಷಣ ಕಾರಣ ತಿಳಿದು ಸಮಾಧಾನ ಪಡಿಸಬೇಕು. ಜಂಗಮ ಎಂದರೆ ಯೋಗಿ, ತ್ಯಾಗಿ, ಧರ್ಮ ಪ್ರಚಾರಕ, ನಿಸ್ವಾರ್ಥ ಸಮಾಜ ಸೇವಕ. ಅವನ ಬೇಕು ಬೇಡಗಳನ್ನು ತಕ್ಷಣವೇ ಗಮನಿಸಬೇಕು. ಪ್ರಧಾನಿ ಗುರು ಬಸವಣ್ಣನವರಿಗೆ ಪ್ರತಿ ಪ್ರಜೆಯೂ ಜಂಗಮ. ಹೀಗಾಗಿ ಪ್ರಜೆಗಳ ಹಿತಚಿಂತಕರಾದ ಅವರಿಗೆ ಪ್ರಜೆಗಳ ತೊಂದರೆಯನ್ನು ಒಂದು ಕ್ಷಣವೂ ಸಹಿಸಿಕೊಳ್ಳಲು ಆಗುವುದಿಲ್ಲ.

**818. ಅರಸನ ಮುನಿಸುವಿಕೆ.**

ಅರಸು ಮುನಿದಡೆ ನಾಡೊಳಗಿರಬಾರದಯ್ಯ;
ಗಂಡ ಮುನಿದಡೆ ಹೆಂಡತಿ ಮನೆಯೊಳಗೆ ಇರಬಾರದಯ್ಯಾ.
ಲಿಂಗದೇವಾ, ಜಂಗಮ ಮುನಿದಡೆ ನಾನೆಂತು ಬದುಕುವೆ? –ಬವದೀ. 820

ರಾಜನು ಕಾರಣಾಂತರದಿಂದ ಮುನಿದಡೆ ಆ ವ್ಯಕ್ತಿಗೆ ಗಡಿಪಾರು ಸಂಭವಿಸುವುದು. ಅವನು ಆ ರಾಜ್ಯದ ಗಡಿಯನ್ನು ಬಿಡಬೇಕಾಗುವುದು. ಅದೇ ರೀತಿ ಗಂಡನು ಮುನಿಸಿಕೊಂಡರೆ ಹೆಂಡತಿಯು ಗಂಡನ ಮನೆಯನ್ನು ಬಿಡಬೇಕಾಗುವುದು. ಜಂಗಮ ಮುನಿದಡೆ ಗುರು ಬಸವಣ್ಣನವರು ಒಂದು ಕ್ಷಣವೂ ತಾಳಿಕೊಳ್ಳಲಾರರು.

**819. ಕರುಳಕಲೆ ಪ್ರಕಟಿತವುಂಟೆ ?**

ರಚ್ಚೆಯ ನೆರವಿಗೆ ನಾಣುನುಡಿ ಇಲ್ಲದಿಹುದೆ?
ಅದರಂತೆನಬಹುದೆ ಸಜ್ಜನ ಸ್ತ್ರೀಯ ?
ಅದರಂತೆನಬಹುದೆ ಭಕ್ತಿರತಿಯ ?
ಕರುಳಕಲೆ ಪ್ರಕಟಿತವುಂಟೆ ? ಲಿಂಗದೇವಾ –ಬವದೀ. 821

ಯಾರಾದರೂ ರಚ್ಚೆ ಹಿಡಿದರೆ ಅವರನ್ನು ಸಮಾಧಾನ ಪಡಿಸಲು ಮೃದುಮಾತುಗಳು ಇಲ್ಲದಿರುತ್ತವೆಯೇ? ತಾಯಿ–ಮಗು, ತಂದೆ–ಮಕ್ಕಳು, ಗಂಡ–ಹೆಂಡತಿ, ಗುರು–ಶಿಷ್ಯ ಉಭಯತರ ಮಧ್ಯೆ ಮುನಿಸು ಬಂದರೆ





ಮನಸ್ಸಿದ್ದರೆ ಆ ಮುನಿಸನ್ನು ನಿವಾರಣೆ ಮಾಡಲು ಮಾತು ಇದ್ದೇ ಇವೆ. ಅದರಂತೆಯೇ ಸಜ್ಜನ ಸ್ತ್ರೀಯನ್ನು ಒಳ್ಳೆಯ ಮಾತುಗಳಿಂದ ಬೇಗನೆ ಸಮಾಧಾನ ಮಾಡಬಹುದು. ಏಕೆಂದರೆ ಆಕೆ ವಿವೇಕಿಯಾಗಿ ಇರುತ್ತಾಳೆ. ಚಂಡಿಯ ರೀತಿಯಲ್ಲಿ ಹಠ ಹಿಡಿಯುವುದಿಲ್ಲ. ಅದೇ ರೀತಿಯಲ್ಲಿ ಭಕ್ತಿಯ ರತಿಗೂ ಬಹುಮುಖಿ ಭಾಷೆಯುಂಟು. ಭಕ್ತನು ದೇವನನ್ನು ಬಗೆಬಗೆಯಾಗಿ ಸ್ತುತಿಸಿ ಮುದ್ದಿಸಿ ಆರಾಧಿಸುತ್ತಾನೆ. ಪ್ರೀತಿ, ಭಕ್ತಿ ಎನ್ನುವುದು ಕರುಳಿನ ಕಲೆ. ಅದನ್ನು ಹೊರಗಡೆ ಪ್ರಕಟಿಸಲು ಬರುವುದಿಲ್ಲ. ಆದರೆ ಬಗೆಬಗೆಯ ಅಭಿವ್ಯಕ್ತಿಯಿಂದ ಮನ ಒಲಿಸಲು ಸಾಧ್ಯವಿದೆ.

**820. ಗುರುಲಿಂಗಜಂಗಮವೇ ಗತಿ.**

ಭೂತ ಒಲಿದು ಆತ್ಮನ ಸೋಂಕಿದ ಬಳಿಕ
ಭೂತದ ಗುಣವಲ್ಲದೆ ಆತ್ಮನ ಗುಣವುಂಟೆ?
ಗುರುಕಾರುಣ್ಯವಾಗಿ ಹಸ್ತಮಸ್ತಕಸಂಯೋಗವಾದ ಬಳಿಕ
ಗುರುಲಿಂಗಜಂಗಮವೆ ಗತಿಯಾಗಿರ್ದೆ ಲಿಂಗದೇವಾ.–ಬವದೀ. 822

ಭೂತವೊಂದು ಬಂದು ಒಬ್ಬ ವ್ಯಕ್ತಿಯ ಮೇಲೆ ಪ್ರವೇಶವಾದರೆ ಆ ವ್ಯಕ್ತಿಯ ಸಹಜ ಗುಣಗಳು ಮಾಯವಾಗಿ ಭೂತದ ಗುಣಗಳೇ ಪ್ರದರ್ಶಿತವಾಗುತ್ತವೆ. (ಪಂಚ ಭೂತಾತ್ಮಕ ದೇಹವು ಆತ್ಮನನ್ನು ಆವರಿಸಿದ ಮೇಲೆ ಆತ್ಮದ ಗುಣಗಳಾದ ಸಚ್ಚಿದಾನಂದ ಸ್ವರೂಪ ಅಡಗಿ ಶರೀರ ಗುಣಗಳೇ ಕಾಣತೊಡಗುತ್ತವೆ.) ಗುರು ಕಾರುಣ್ಯವಾಗಿ ಹಸ್ತಮಸ್ತಕ ಸಂಯೋಗವಾದ ಬಳಿಕ ಮೊದಲಿನ ಮಾನವ ಗುಣಗಳು ಮಾಯವಾಗಿ ದೈವೀಗುಣಗಳೇ ಆವರಿಸುತ್ತವೆ. ಗುರು, ಲಿಂಗ, ಜಂಗಮಗಳೇ ವ್ಯಕ್ತಿಯನ್ನು ಆವರಿಸಿಕೊಂಡು ಬಿಟ್ಟವೆ. ಇವನ್ನು ಬಿಟ್ಟರೆ ಭಕ್ತನಿಗೆ ಬದುಕೇ ಇಲ್ಲ.

**821. ಲಿಂಗದೇವನ ಪ್ರಭಾವ**

ಹಸಿವು, ತೃಷೆ, ನಿದ್ರೆ, ವಿಷಯಂಗಳ ಮರೆದೆ ;
ನೀವು ಕಾರಣ !
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳ ಮರೆದೆ:
ನೀವು ಕಾರಣ !
ಪಂಚೇಂದ್ರಿಯ, ಸಪ್ತಧಾತು, ಅಷ್ಟಮದಂಗಳ ಮರೆದೆ,
ನೀವು ಕಾರಣ ! ಲಿಂಗದೇವಯ್ಯಾ. –ಬವದೀ. 823

ಪರಮಾತ್ಮನ ಚಿಂತೆ, ನೆನಹು ಸಾಧಕನನ್ನು ಆವರಿಸಿಕೊಳ್ಳುತ್ತಲೇ ಅವನ ಬಹಿರಂಗ ಪ್ರಜ್ಞೆಯೇ ಅಳಿದು ಹೋಗುತ್ತದೆ. ತನುಗುಣಗಳಾದ ಹಸಿವು, ಬಾಯಾರಿಕೆ, ನಿದ್ರೆ, ವಿಷಯ ಎಲ್ಲವೂ ಮರೆತು ಹೋಗುತ್ತವೆ. ಅದೇ ರೀತಿ ಮನೋಗುಣಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಅಳಿದು ಹೋಗುತ್ತವೆ. ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಸಪ್ತಧಾತು, ಅಷ್ಟಮದ ಮುಂತಾದುವೆಲ್ಲ ತಮ್ಮ ಸ್ವಾಭಾವಿಕ ಲಕ್ಷಣಗಳನ್ನು ಕಳೆದುಕೊಳ್ಳುತ್ತವೆ. ಏಕೆಂದರೆ ಲಿಂಗದೇವನೇ ಇಡೀ ವ್ಯಕ್ತಿತ್ವವನ್ನು ಆವರಿಸಿಕೊಂಡುಬಿಟ್ಟಿದ್ದಾನೆ.

**822. ಸರ್ವಾರ್ಪಣ**

ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ,
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ,
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ
ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ
ಎನಗೆ ಬೇರೆ ವಿಚಾರವುಂಟೆ, ಲಿಂಗದೇವಾ? –ಬವದೀ. 824

ಗುರು ಬಸವಣ್ಣನವರು ದೇವರಿಗೆ ಸರ್ವಾರ್ಪಣ ಮಾಡಿಕೊಂಡಿದ್ದಾರೆ. ಹೀಗಾಗಿ ಲಿಂಗದೇವನೇ ಸರ್ವವನ್ನೂ ಆವರಿಸಿಕೊಂಡಿದ್ದಾನೆ. ಶರೀರ ದೇವನಿಗೆ ಅರ್ಪಣವಾಗಿದೆ. ಹೀಗಾಗಿ ಬೇರೆ ಶರೀರವಿಲ್ಲ ಮನಸ್ಸು ಅರ್ಪಣವಾಗಿದೆ. ಮನಕ್ಕೆ ಬೇರೆ ಚಟುವಟಿಕೆಯೇ ಇಲ್ಲ. ತಮ್ಮ ಸಂಪತ್ತೆಲ್ಲವೂ ದೈವೀಕಾರ್ಯಕ್ಕೆ ಮೀಸಲಾಗಿದೆ. ಬಂಧನ ಉಂಟು ಮಾಡಲು ಬೇರೆ ಧನವಿಲ್ಲ. ಹೀಗೆ ತನು ಮನ ಧನಗಳು ದೇವಾರ್ಪಿತವಾದುದರಿಂದ ಅನ್ಯ ವಿಚಾರವೇ ಇಲ್ಲವಾಗಿದೆ.

823. ಲಿಂಗದೇವ ಏಕೋಭಾವ.

ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ ಧರ್ಮ!
ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ!
ಆರಿಡದಿರಿಂ ಭೋ, ನಿಮ್ಮ ಧರ್ಮ!
ಅಲ್ಲಿ ಉಂಬಡೆ ಸಂಗ, ಇಲ್ಲಿ ಉಂಬಡೆ ಸಂಗ!
ಲಿಂಗದೇವ ಏಕೋಭಾವ. –ಬವದೀ. 825

ಈ ವಚನವು ಒಂದು ಚಿತ್ರಣವನ್ನು ಕಟ್ಟಿಕೊಡುತ್ತದೆ. ಒಂದು ಘಟನೆಯನ್ನು ಬಣ್ಣಿಸುತ್ತದೆ ಮಹಾಮನೆಯ ಗೋವುಗಳನ್ನು ಗೋಪಾಲಕರು ಮೇಯಲು ಒಯ್ದಿದ್ದಾರೆ. ಅಲ್ಲಿ ಕಳ್ಳರ ಸೋಗಿನ ಒಂದು ತಂಡ ದೌರ್ಜನ್ಯದಿಂದ ಗೋವುಗಳನ್ನು ಕದ್ದೊಯ್ಯುತ್ತಾರೆ. ಗಾಬರಿಯಿಂದ ಗೋಪಾಲಕರು ಓಡಿ ಬಂದು, ಆಕಳುಗಳನ್ನು ಕಳ್ಳರು ಕದ್ದೊಯ್ದರು. ಬಿಡಿಸಿಕೊಂಡು ಬರಲು ವ್ಯವಸ್ಥೆ ಮಾಡಿರಿ ಎಂದು ಹೇಳುತ್ತಾರೆ. ಅದಕ್ಕೆ ಗುರು ಬಸವಣ್ಣನವರು ಕೊಡುವ ಪ್ರತಿಕ್ರಿಯೆ ಹೀಗಿದೆ. "ಆಕಳುಗಳನ್ನು ಕಳ್ಳರು ಕೊಂಡೊಯ್ದರು ಎಂದು ಬೊಬ್ಬೆ ಹಾಕಬೇಡಿ, ಗೋಳಾಡಬೇಡಿ. ಅಲ್ಲಿ ಉಣ್ಣುವವನೂ ಸಂಗಮನಾಥನೆ, ಇಲ್ಲಿ ನಮ್ಮವರ ಮೂಲಕ ಉಣ್ಣುವವನೂ ಸಂಗಮನಾಥನೆ ! "

ಇನ್ನೂ ಮುಂದುವರಿದು, ತಾಯಿ ಹಸುಗಳ ಬರುವಿಗಾಗಿ ಹಂಬಲಿಸುತ್ತಿದ್ದ ಎಳೆಗರುಗಳನ್ನು ಗಾಡಿಯಲ್ಲಿ ಹಾಕಿಕೊಂಡು ಹೋಗಿ ಆಯಾ ಹಸುಗಳ ಬಳಿ ಬಿಟ್ಟುಬರುವ ವ್ಯವಸ್ಥೆಯನ್ನೂ ಮಾಡಿರಬೇಕು. ಇದರಿಂದ ಆ ಕಳ್ಳರೂ ಪರಿವರ್ತನೆಗೊಂಡು ಶರಣರಾಗಿದ್ದಾರೆ. ಎಂಥಾ ಚಿತ್ತಸಮತೆ, ಔದಾರ್ಯ ! ಈ ವಚನವು ಒಂದು ಘಟನೆಗೆ ಅದಕ್ಕಿಂತ ಮುಖ್ಯವಾಗಿ ಗುರು ಬಸವಣ್ಣನವರ ಅದ್ಭುತ ವ್ಯಕ್ತಿತ್ವಕ್ಕೆ ಕೈಕನ್ನಡಿಯಾಗಿದೆ.

824. ಲಿಂಗದೇವ ಏಕೋಭಾವ.

ಅರ್ಥ ಪ್ರಾಣ ಅಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ.
ಆದಿರುದ್ರನ ಮಗಳು ಆದಿಶಕ್ತಿ,
ಆದಿಶಕ್ತಿಯ ಮಗ ವಿಷ್ಣು,
ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ.
ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ.
ಎನ್ನ ಮನದೊಡೆಯ ಮಹಾದೇವಾ,
ನಿಮ್ಮ ಮನವ ನಿಮಗೊಪ್ಪಿಸಿ ನಾ ಶುದ್ಧ ಕಾಣಾ, ಲಿಂಗದೇವಾ. –ಬವದೀ. 826

ಭಕ್ತನು ಗುರು ಲಿಂಗ ಜಂಗಮಕ್ಕೆ ಅರ್ಥ ಅಂದರೆ ಸಂಪತ್ತು, ಪ್ರಾಣ ಮತ್ತು ಅಭಿಮಾನ ಮೂರನ್ನೂ ಸಮರ್ಪಿಸಬೇಕು. ಆದರಿಷ್ಟೇ ಸಾಲದು. ಶರಣರ ದೃಷ್ಟಿಯಲ್ಲಿ ಲಕ್ಷ್ಮಿಯು ದೇವತೆಯಲ್ಲ ಜನರ ಸೇವೆಗಾಗಿ ಇರುವ ತೊತ್ತು. ಅಂತ ತೊತ್ತನ್ನು ಸಮರ್ಪಿಸಿದರೆ ಭಕ್ತನಾಗುವನೆ ? ಮನಸ್ಸಿನ ಒಡೆಯ ಮಹಾದೇವ; ಆ ಮನವನ್ನು ಲಿಂಗದೇವನಿಗೆ ಸರ್ವಾರ್ಪಣೆ ಮಾಡಿ ಶುದ್ಧನಾಗುವವನೇ ನಿಜ ಶರಣ.

825. ಸರ್ವಾರ್ಪಣೆ.

ಮಾಡುವಾತ ನಾನಲ್ಲಯ್ಯಾ, ನೀಡುವಾತ ನಾನಲ್ಲಯ್ಯಾ,
ಬೇಡುವಾತ ನಾನಲ್ಲಯ್ಯ, ನಿಮ್ಮ ಕಾರುಣ್ಯವಲ್ಲದೆ.







ಎಲೆ ದೇವಾ, ಮನೆಯ ತೊತ್ತು ಅಲಸಿದಡೆ ಒಡತಿ ಮಾಡಿಕೊಂಬಂತೆ,
ನಿನಗೆ ನೀ ಮಾಡಿಕೊ, ಲಿಂಗದೇವಾ.. –ಬವದೀ. 827

ಅನುಭವ ಮಂಟಪ, ದಾಸೋಹ ಎಲ್ಲವೂ ಬೃಹತ್ತಾಗಿ ಬೆಳೆದು ನಿಂತಿವೆ. ಗುರು ಬಸವಣ್ಣನವರನ್ನು ಎಲ್ಲರೂ ಮನವಾರೆ ಕೊಂಡಾಡುತ್ತಿದ್ದಾರೆ. ಆಗ ವಿನೀತರಾಗಿ ಹೇಳುವ ವಚನವಿದು. ಮಾಡುವಾತ ನಾನಲ್ಲ. ಬೇಡುವಾತ ನಾನಲ್ಲ. ಇದೆಲ್ಲವೂ ನಿಮ್ಮ ಕಾರುಣ್ಯದಿಂದ ನಡೆಯುತ್ತಲಿದೆ. ಅತಿಥಿಗಳು ಬಂದಾಗ ಮನೆಯ ಸೇವಕಿ ಬೇಸರಿಸಿದಡೆ ಮನೆಯೊಡತಿಯೇ ಅತಿಥಿಗಳಿಗೆ ಉಪಚಾರ ಮಾಡುವ ಜವಾಬ್ದಾರಿ ಹೊರುವಂತೆ ಲಿಂಗದೇವ ನೀನೇ ಎಲ್ಲವನ್ನೂ ನಿರ್ವಹಿಸುತ್ತಿರುವೆ. ನಾನು ನಿಮಿತ್ತ ಮಾತ್ರ.

826. ಮನವೇ ಗುರು.

ಮುನ್ನಿನ ಜನ್ಮದಲ್ಲಿ ಗುರುಲಿಂಗ-ಜಂಗಮವ ಪೂಜಿಸಲರಿಯದ ಕಾರಣ
ಬಹುಜನ್ಮಕ್ಕೆ ತಂದಿಕ್ಕಿದೆಯಯ್ಯಾ ಎನ್ನನು.
ಎನಗೆ ಗುರುಪಥವ ತೋರಿದವರಾರು?
ಲಿಂಗಪಥವ ತೋರಿದವರಾರು?
ಜಂಗಮಪಥವ ತೋರಿದವರಾರು?
ಪಾದೋದಕ ಪ್ರಸಾದವ ತೋರಿದವರಾರು?
ತೋರುವ ಮನವೆ ನೀವೆಂದರಿತೆ,
ಎನಗಿನ್ನಾವ ಭವವಿಲ್ಲ, ಲಿಂಗದೇವಾ. –ಬವದೀ. 828

ಇದು ಬಹಳ ಮಹತ್ವಪೂರ್ಣವಾದ ವಚನ. ಇದರಲ್ಲಿ ಒಂದು ಸಿದ್ಧಾಂತವಿರುವುದಷ್ಟೆ ಅಲ್ಲ. ಒಂದು ಐತಿಹಾಸಿಕ ಘಟನೆಯನ್ನು ಬಿಂಬಿಸುತ್ತದೆ. ಜನ್ಮ ಜನ್ಮಾಂತರಗಳು ಏಕೆ ಬರುತ್ತವೆ ? ಹಿಂದಿನ ಜನ್ಮದಲ್ಲಿ ಗುರು–ಲಿಂಗ–ಜಂಗಮವನ್ನು ಪೂಜಿಸಲು ಅರಿಯದ್ದರಿಂದ ಜನ್ಮಗಳನ್ನು ಎತ್ತಬೇಕಾಯಿತು. ಗುರು, ಲಿಂಗ, ಜಂಗಮವನ್ನು ಆರಾಧಿಸಿದರೆ ಜನ್ಮಾಂತರಗಳನ್ನು ಕಳೆದುಕೊಳ್ಳಬಹುದು ಎಂಬ ಜ್ಞಾನ ಯಾರಿಂದ ಉಂಟಾಯಿತು ? ಹೇಗೆ ಉಂಟಾಯಿತು? ನನಗೆ ಗುರುವಾಗಿ ಪಥವ ತೋರಿದವರಾರು? ಈ ಇಷ್ಟಲಿಂಗದ ಪಥವ ತೋರಿದವರಾರು? ಜಂಗಮ ಪಥ, ಪಾದೋದಕ ಪ್ರಸಾದ ತತ್ತ್ವವನ್ನು ತೋರಿದವರು ಯಾರು ? ಯಾರೂ ಅಲ್ಲ. ಗುರು ಬಸವಣ್ಣನವರ ಅಂತರ್ಮನ ! ದೇವನ ಅನುಗ್ರಹದಿಂದಲೇ ಇಂಥ ಸತ್ಯವನ್ನು ಅರಿಯಲು ಸಾಧ್ಯವಾಯಿತು ಎಂದು ಶರಣಾಗತ ಭಾವದಿಂದ ಗುರು ಬಸವಣ್ಣನವರು ಲಿಂಗದೇವನಿಗೆ ಕೃತಜ್ಞತೆ ಸಲ್ಲಿಸುತ್ತಾರೆ.

ಗುರು ಬಸವಣ್ಣನವರಿಗೆ ಒಬ್ಬ ಗುರು ಇದ್ದಿರಲೇಬೇಕು ಎಂಬ ಕೆಲವರ ವಾದ ಮತ್ತು ಸಂದೇಹಕ್ಕೆ ಇಲ್ಲಿ ಉತ್ತರವಿದೆ. ಅವರಿಗೆ ಯಾರೂ ಗುರುವಿಲ್ಲ. ಅವರ ಅಂತರ್ಮನವೇ ಅವರಿಗೆ ಗುರು. ಗುರು–ಲಿಂಗ–ಜಂಗಮ–ಪಾದೋದಕ–ಪ್ರಸಾದ ಈ ಐದು ತತ್ತ್ವಗಳಿಂದ ಕೂಡಿದ ಶರಣ (ಬಸವ) ಪಥದ ಆದ್ಯರು ಗುರು ಬಸವಣ್ಣನವರೇ ಎಂಬುದಕ್ಕೆ ಈ ವಚನವು ಸಾಕ್ಷ್ಯ ನುಡಿಯುತ್ತದೆ.

827. ದಾಸೋಹದ ಮಹತ್ವ.

ಜನ್ಮ ಜನ್ಮಕ್ಕೆ ಹೋಗಲೀಯದೆ 'ಸೋಹಂ' ಎಂದೆನಿಸದೆ
'ದಾಸೋಹಂ' ಎಂದೆನಿಸಯ್ಯಾ.
ಲಿಂಗಜಂಗಮಪ್ರಸಾದದ ನಿಲವ ತೋರಿ ಬದುಕಿಸಯ್ಯಾ,
ಲಿಂಗದೇವಾ, ನಿಮ್ಮ ಧರ್ಮ ! –ಬವದೀ. 829

'ಸೋಹಂ' ಸಿದ್ಧಾಂತವು ಅದ್ವೈತಕ್ಕೆ ಅವಕಾಶ ಮಾಡಿಕೊಡುವುದು. 'ಸ ಅಹಂ'–ಅವನೇ ನಾನು ಎಂದಾಗ ದೇವರಲ್ಲಿ ಶರಣಾಗತಿ ಬರುವುದಿಲ್ಲ. ಜಗತ್ತನ್ನು ನಿರ್ಮಾಣ ಮಾಡಿದ ಸೃಷ್ಟಿಕರ್ತನಲ್ಲಿ ಕೃತಜ್ಞತೆ, ಶರಣಾಗತಿ ಬಹಳ ಮುಖ್ಯ. ಅವನ ಕರುಣೆ (Grace) ಎಲ್ಲಕ್ಕೂ ದೊಡ್ಡದು. 'ದಾಸ ಅಹಂ' ನಾನು ಪರಮಾತ್ಮನ ಸೇವಕ, ದಾಸ ಎಂಬ ಮನೋಭಾವ ಬಹು ಮುಖ್ಯ ಅಂಥ ಲಿಂಗದೇವನ ಮತ್ತು ಅವನ ಸಾಕಾರ ಸ್ವರೂಪವಾದ ಜಂಗಮದ ಪ್ರಸಾದದಿಂದ ಮಾತ್ರ ಜನ್ಮಾಂತರದ ಬಳ್ಳಿಯನ್ನು ಕತ್ತರಿಸಿಕೊಳ್ಳಲು ಸಾಧ್ಯ

828. ಪ್ರಸಾದದ ಮಹಿಮೆ.

ಆಶೆಯಾಮಿಷ ತಾಮಸದಿಂದ ಭವಬಂಧನವಾದುದನರಿಯಾ!
ತ್ರಿವಿಧ ತ್ರಿವಿಧಾವಸ್ಥೆಯ ಮರೆಯಾ!
'ಓಂ ನಮಃ ಶಿವಾಯ, ಶರಣೆ'ಂಬುದ ಬಿಡದೆ ನೆನೆಯಾ ಮನವೆ!
ಲಿಂಗದೇವನ ಪ್ರಸಾದ ಸಾನ್ನಿಧ್ಯದಿಂದ
ಭವಜನ್ಮ ಕರ್ಮ ಪಂಚಭೂತಪೂರ್ವನಾಸ್ತಿ. –ಬವದೀ. 830

ಮಾನವನಿಗೆ ಜನ್ಮಾಂತರದ ಬಂಧನ ಯಾವುದರಿಂದ ಆಗುತ್ತದೆ ? ಆಸೆ, ಆಮಿಷ ಮತ್ತು ತಾಮಸಗಳಿಂದ. ಆಸೆ–ಆಮಿಷಗಳ ಪಾಶ, ತಾಮಸ ವೃತ್ತಿ ಭವಬಂಧನಕ್ಕೆ ಕಾರಣ ಇದರಿಂದ ಜೀವಾತ್ಮವು ಜಾಗ್ರತ, ಸ್ವಪ್ನ, ಸುಷುಪ್ತಿ ಎಂಬ ಅವಸ್ಥಾತ್ರಯಂಗಳಲ್ಲಿ ತಿರುಗುತ್ತದೆ. ಅದಕ್ಕಾಗಿ ಗುರು ಬಸವಣ್ಣನವರು ತಮ್ಮ ಮನಸ್ಸಿಗೆ ಹೇಳಿಕೊಳ್ಳುವಂತೆ ಜಗತ್ತಿಗೆ ಬೋಧೆ ಮಾಡುತ್ತಿದ್ದಾರೆ.

ಆಸೆ, ಆಮಿಷ, ತಾಮಸಗಳಿಂದ ಜನ್ಮಾಂತರದ ಬಂಧನ ಎಂಬುದನ್ನು ಅರಿತುಕೊ. ಜಾಗ್ರತ ಸ್ವಪ್ನ ಸುಷುಪ್ತಾವಸ್ಥೆಗಳನ್ನು ದಾಟುವ ಪ್ರಯತ್ನ ಮಾಡು. ಷಡಕ್ಷರಿ ಮಂತ್ರ ಓಂ ನಮಃ ಶಿವಾಯ ಎಂಬುದನ್ನು ಶರಣಾಗತ ಭಾವನೆಯಿಂದ ನೆನೆ. ಎಲೆ ಮಾನವ (ಮನವೇ) ಲಿಂಗದೇವನ ಪ್ರಸಾದ ಸಾನ್ನಿಧ್ಯದಿಂದ ಮುಂದಿನ ಭವಾಂತರಗಳು, ಈ ಜನ್ಮದಲ್ಲಿ ಪಂಚಭೂತ ಕಾಯವಿದರ ಗುಣಗಳು ಇಲ್ಲವಾಗುವುವು.

829. ಬಲೆಗಳಲ್ಲಿ ಎರಡು ಬಗೆ.

ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯಾ,
ಪಾಪದ ಬಲೆಯ ತಂದು ಮುಂದೆ ಒಡ್ಡಿದಿರಯ್ಯಾ,
ಬೇಟೆಗಾರನು ಮೃಗವನಟ್ಟಿ ಬರಲು ಮೃಗವು ಗೋರಿಗೊಳಗಾದುದಯ್ಯಾ!
ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು
ಕೂಡಲಸಂಗಮದೇವಂಗೆ ಓಗರವಾಯಿತ್ತು. –ಬವದೀ. 831

ಈ ಜಗತ್ತೇ ಒಂದು ಬೆಟ್ಟ. ಇದಕ್ಕೆ ಮಾಯಾ ಜಾಲ ಎಂಬ ಬಲೆ ಹರಡಿಕೊಂಡು ಬಿಟ್ಟಿದೆ. ಪಾಪದ ಬಲೆಯಿಂದ ಜೀವಾತ್ಮ ತಪ್ಪಿಸಿಕೊಳ್ಳಲಾರದಂತಹ ಪರಿಸ್ಥಿತಿ. ಹೀಗಾಗಿ ಭವ ಎಂಬ ಬೇಟೆಗಾರನು ಬೆನ್ನಟ್ಟಿ ಬರಲು ತಪ್ಪಿಸಿಕೊಳ್ಳಲಾರದೆ ಈ ಜೀವಾತ್ಮ ಎಂಬ ಮೃಗ ಬಂಧನಕ್ಕೆ ಒಳಗಾಗುತ್ತದೆ.

ಇನ್ನೊಂದು ಬಗೆಯ ಬಲೆ ಇದೆ. ಅದು ದೇವರು ಒಡ್ಡುವ ಬಲೆ. ಅದು ಭಕ್ತಿಯ ಬಲೆ. ಇದರಲ್ಲಿ ಸಿಕ್ಕಿದ ಜೀವಾತ್ಮವು ಲಿಂಗದೇವನಿಗೆ ಪ್ರಸಾದವಾಗಿ ಅರ್ಪಿತವಾಗುವುದು. ಈ ಬಲೆ ಬಂಧನವನ್ನು ಬಿಡಿಸುವಂತಹುದು.

830. ಮನವೇ ಭಾಜನ.

ಪರಿಯಾಣವೆ ಭಾಜನವೆಂಬರು: ಪರಿಯಾಣ ಭಾಜನವಲ್ಲ,
ಲಿಂಗಕ್ಕೆ ತನ್ನ ಮನವೆ ಭಾಜನ.
ಪ್ರಾಣವನು ಬೀಸರವೋಗದೆ ಮೀಸಲಾಗರ್ಪಿಸಬಲ್ಲಡೆ
ಕೂಡಿಕೊಂಡಿಪ್ಪ, ನಮ್ಮ ಲಿಂಗದೇವ. –ಬವದೀ. 832

ಪ್ರಸಾದಿಕರು ಊಟಕ್ಕಾಗಿ ತಟ್ಟೆಯೊಂದನ್ನು ಕಾಯ್ದಿಟ್ಟುಕೊಳ್ಳುವರು. ತಮ್ಮ ಊಟಕ್ಕೆ ಅದೇ ಪರಿಯಾಣವೇ ಬೇಕು ಎನ್ನುವರು. ನಾವು ಅರ್ಪಿಸುವುದು ಲಿಂಗಕ್ಕೆ. ಲಿಂಗದೇವನಿಗೆ ಬೇಕಾದುದು ಕಂಚಿನ ಪರಿಯಾಣವಲ್ಲ ಮನಸ್ಸು ಎಂಬ ತಟ್ಟೆ, ತನ್ನ ಮನವನ್ನು ಪ್ರಾಣವನ್ನು ಎರಡಾಗದ ಭಾವದಿಂದ ದೇವನಿಗೆ ಮೀಸಲಾಗಿ ಅರ್ಪಿಸಿದರೆ ಲಿಂಗದೇವನು ಕೂಡಿಕೊಳ್ಳುವನು.

831. ದೈವೀಕರಣ.

ಆತ್ಮ ಲಿಂಗ, ಪರಮಾತ್ಮ ಜಂಗಮ,
ತನು ಮಧ್ಯೆ ಪ್ರಸಾದವಾಯಿತ್ತು,





ನಿಶ್ಚಿಂತ ನಿವಾಸವಾಯಿತ್ತು.
ಲಿಂಗದೇವನ ಶರಣರ ಸಂಗದಿಂದ
ನಿಶ್ಚಿಂತ ನಿವಾಸವಾಯಿತ್ತು! –ಬವದೀ. 833

ಆತ್ಮವು ದೇಹಾಂತರ್ಗತ ಚೈತನ್ಯ. ಪರಮಾತ್ಮನು ಬ್ರಹ್ಮಾಂಡಾಂತರ್ಗತ ಚೈತನ್ಯ. ಇವೆರಡರ ಸಂಯೋಗವಾಗುವುದು ಸಾಧಕನ ದೇಹದಲ್ಲಿಯೆ. ಹೀಗಾಗಿ ಇವೆರಡರ ಸಮ್ಮಿಲನದಿಂದ ತನುವು ಪ್ರಸಾದವಾಗುವುದು ಅಂದರೆ ದೈವೀಕರಣಗೊಳ್ಳುವುದು. ಇದು ದೇವನಿಗೆ ನಿಶ್ಚಿಂತ ನಿವಾಸವಾಗುವುದು. ಈ ಸಾಧನೆಗೆ ಸಹಾಯಕವಾಗುವುದು ಶರಣರ ಸಂಗ; ಶರಣರ ಒಡನಾಟದಿಂದ ಸಾಧಕನು ದೈವೀಕರಣಗೊಳ್ಳುವ ಬಗೆಯನ್ನು ಕಲಿಯುವನು.

832. ಪ್ರಸಾದದ ಮಹಿಮೆ.

ಲೋಹ ಪರುಷವ ಮುಟ್ಟುವುದಲ್ಲದೆ
ಪರುಷ ಪರುಷವ ಮುಟ್ಟುವುದೆ ಅಯ್ಯಾ?
ಅಂಗವಿಡಿದಂಗೆ ಪ್ರಸಾದವಲ್ಲದೆ, ಲಿಂಗವಿಡಿದಂಗೆ ಪ್ರಸಾದವೆಲ್ಲಿಯದೊ?
ಅಣೋರಣೀಯಾನ್ ಮಹತೋ ಮಹೀಯಾನ್
ಹಿರಿದಕ್ಕೆ ಹಿರಿದು, ಕಿರಿದಿಂಗೆ ಕಿರಿದು, ವಾಙ್ಮನಕ್ಕಗೋಚರ
ಲಿಂಗದೇವಾ. ಸ್ವರೂಪು ಪ್ರಸಾದ, ನಿರೂಪು ಲಿಂಗೈಕ್ಯ! –ಬವದೀ. 834

ಈ ವಚನದ ಮೂಲಕ ಧರ್ಮಪಿತ ಬಸವಣ್ಣನವರು ಒಂದು ಸಮಸ್ಯೆಗೆ ಪರಿಹಾರ ಸೂಚಿಸಿದ್ದಾರೆಂದು ಊಹಿಸಬಹುದು. ಅದೇನೆಂದರೆ ಭವಿಗಳಿಗೆ ಲಿಂಗ ಪ್ರಸಾದವನ್ನು ಕೊಡಬಹುದೆ ? ಎಂಬುದಾಗಿದೆ. ಒಂದು ಮನೆಯಲ್ಲಿ ಗುರು–ಜಂಗಮರ ಪೂಜೆ ನಡೆದಿರುತ್ತದೆ ಎಂದುಕೊಳ್ಳುವ. ಅವರ ಮನೆಯಲ್ಲಿ ಲಿಂಗಧಾರಣೆ ಇಲ್ಲದ 'ಭವಿ'ಗಳಿರುತ್ತಾರೆ ಎಂದುಕೊಳ್ಳುವ. ಅಥವಾ ಪೂಜೆಗೆ ಬಂದವರಲ್ಲಿ ಲಿಂಗಾಯತೇತರರಿರುತ್ತಾರೆ. ಕರುಣ ಪ್ರಸಾದವನ್ನು ಅವರಿಗೆ ಕೊಡಬಹುದೆ. ಬಾರದೆ ?

ಸಾಂಪ್ರದಾಯಿಕವಾಗಿ ಕೊಡುವುದಿಲ್ಲ. ಆದರೆ ಈ ವಚನದ ಆದೇಶದಂತೆ ಕೊಡಬಹುದಲ್ಲವೆ ? ಪರುಷ ಪರುಷವನ್ನು ಮುಟ್ಟುವುದರಲ್ಲಿ ಏನು ವಿಶೇಷ ? ಪರುಷ ಲೋಹವನ್ನು ಮುಟ್ಟಿ ಬಂಗಾರವನ್ನಾಗಿ ಪರಿವರ್ತಿಸಿದರೆ ಅದು ಪರುಷದ ಘನತೆಯನ್ನು ಎತ್ತಿ ಹಿಡಿಯುತ್ತದೆ. ಹಾಗೆ ಲಿಂಗದೇಹಿಯಾದವನಿಗೆ ಪ್ರಸಾದ ಕೊಡುವುದರಲ್ಲಿ ವಿಶೇಷವೇನಿದೆ ? ಅಂಗದೇಹಿ–ಭವ ಜೀವಿಯಾದವನಿಗೆ ಲಿಂಗಪ್ರಸಾದವನ್ನು ಕೊಟ್ಟು ಪರಿವರ್ತನೆ ಮಾಡುವುದರಲ್ಲಿ ವಿಶೇಷವಿದೆ. ಪ್ರಸಾದದ ಮಹಿಮೆ ಅತ್ಯಂತ ಹಿರಿದು; ಲಿಂಗಪ್ರಸಾದ ಯಾರ್‍ಯಾರನ್ನು ಹೇಗೆ ಹೇಗೆ ಪರಿವರ್ತಿಸುವುದು ಎಂಬುದನ್ನು ಹೇಳಲಾಗುವುದಿಲ್ಲ. ಅದು ತನ್ನದೇ ಆದ ಘನತೆಯುಳ್ಳುದು. ಅದು ನಿರೂಪವಾದಾಗ ಅನುಗ್ರಹ ಎನಿಸಿಕೊಂಬುದು.

833. ಜಂಗಮವೇ ಸರ್ವಸ್ವ.

ಜಂಗಮವೆ ಲಿಂಗವೆನಗೆ, ಜಂಗಮವೆ ಪ್ರಾಣವೆನಗೆ,
ಲಿಂಗದೇವಯ್ಯಾ,
ಎನಗೆಯೂ ನಿನಗೆಯೂ ಜಂಗಮಪ್ರಸಾದವೇ ಪ್ರಾಣ. –ಬವದೀ. 835

ಈಗಾಗಲೇ ಅನೇಕ ಬಾರಿ ಹೇಳಿರುವಂತೆ ಜಂಗಮ ಪದವನ್ನು ಹಲವಾರು ಅರ್ಥವಿಟ್ಟು ಗುರು ಬಸವಣ್ಣನವರು ಬಳಸಿದ್ದಾರೆ. ಈ ವಚನದಲ್ಲಿ ಜಂಗಮ ಪದಕ್ಕೆ ಸಮಾಜ, ಸಮುದಾಯ ಎಂದು ಅರ್ಥಮಾಡಬಹುದು. ಸಮಾಜವೇ ಲಿಂಗವೆನಗೆ, ಪ್ರಾಣವೆನಗೆ, ಸರ್ವಸ್ವವೆನಗೆ ಎಂದು ಹೇಳುತ್ತಾರೆ. (ಇಷ್ಟ) ಲಿಂಗದೇವಯ್ಯಾ, ನಾನೂ ನೀನು ಬದುಕಿರುವುದೇ ಸಮಾಜದ ನೆರವಿನಿಂದ ಎಂದು ಹೇಳಿದ್ದಾರೆ.

834. ಜಂಗಮ ಪ್ರಸಾದ

ಅಯ್ಯಾ! ನೀನೆಂದಡೆ ಎಂಬೆನು?
ನಿನ್ನ ಹಂಗೇನು ಹರಿಯೇನು?

ನಿನ್ನ ಮುಖದಲ್ಲಿ ಒಂದಗುಳು ಸವೆಯದು.
ನಿನ್ನ ಪ್ರಸಾದವ ಕೊಂಡೆನ್ನ ಭವಕ್ಕೆ ಬೀಜವಾಯಿತ್ತು!
ಜಂಗಮವೆ ಲಿಂಗವೆಂದು ಒಕ್ಕುದ ಕೊಂಡಡೆ
ಎನ್ನ ಭವಂ ನಾಸ್ತಿಯಾಯಿತ್ತು ಲಿಂಗದೇವಾ. –ಬವದೀ. 836

ಲಿಂಗದೇವನ ಸಲುಗೆಯಿಂದ ಮಾತನಾಡುತ್ತ ಜಂಗಮದ ಹಿರಿಮೆಯನ್ನು ಗುರು ಬಸವಣ್ಣನವರು ಎತ್ತಿ ಹಿಡಿಯುತ್ತಿದ್ದಾರೆ. "ಅಯ್ಯಾ ನಿನಗೆ ಎದುರು ಉತ್ತರ ಕೊಡಲು ನಾನು ಸಿದ್ಧನಿದ್ದೇನೆ. ನಿನ್ನ ಹಂಗು ನಮಗಿಲ್ಲ. ನಿನಗೆ ನೈವೇದ್ಯ ಮಾಡಿದರೆ ತಿಂದು ಒಂದಗುಳನ್ನು ಸವೆಸುವುದಿಲ್ಲ. ಹಲವು ಜನ್ಮಗಳಲ್ಲಿ ನಿನ್ನ ಪ್ರಸಾದವನ್ನು ಭವ ತಪ್ಪಲಿಲ್ಲ. ಜಂಗಮವೇ ಲಿಂಗವೆಂದು ನಂಬಿ ದಾಸೋಹ ಮಾಡಿ ಗಣಪ್ರಸಾದವನ್ನು ತೆಗೆದುಕೊಂಡರೆ ಭವವು ನಾಸ್ತಿಯಾಗುವುದು ಖಂಡಿತ"

835. ಅನುಭಾವದಿ ಹಿರಿಮೆ.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ,
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ,
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ,
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ,
ಲಿಂಗದೇವನ ಶರಣರ ಅನುಭಾವದಿಂದ
ಎನ್ನ ಭವದ ಕೇಡು ನೋಡಯ್ಯಾ! –ಬವದೀ. 837

ಗುರು ಬಸವಣ್ಣನವರ ಅತ್ಯಂತ ಜನಪ್ರಿಯ ವಚನಗಳಲ್ಲಿ ಇದೂ ಒಂದು. ಎಲ್ಲಿ ಜ್ಞಾನದ ಅವತೀರ್ಣವಾಗುತ್ತದೆಯೋ ಅಲ್ಲಿ ಅಜ್ಞಾನವೂ ತನ್ನಿಂದ ತಾನೇ ತೊಲಗುತ್ತದೆ. ಉಪನಿಷತ್ತಿನ ಒಂದು ಶ್ಲೋಕದಲ್ಲಿ "ತಮಸೋ ಮಾ ಜ್ಯೋತಿರ್ಗಮಯ" ಎಂಬ ವಾಕ್ಯ ಬರುತ್ತದೆ. ಸಾಧಕನು ಕತ್ತಲೆಯಿಂದ ಬೆಳಕಿನ ಕಡೆಗೆ ಸಾಗುವ ಪ್ರಯತ್ನ ಮಾಡಬೇಕೆಂಬ ಆಶಯವಿಲ್ಲಿದೆ. ಆದರೆ ಗುರು ಬಸವಣ್ಣನವರ ಪ್ರಯತ್ನ ಕತ್ತಲೆಯಿಂದ ಬೆಳಕಿನ ಕಡೆಗೆ ಸಾಗುವುದಕ್ಕಿಂತಲೂ, ಕತ್ತಲೆ ಇದ್ದಲ್ಲಿ ಬೆಳಕನ್ನು ಇಳಿಸುವುದೇ ಆಗಿದೆ. ಅದನ್ನೇ ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ ಎನ್ನುವ ಮೂಲಕ ಪ್ರತಿಪಾದಿಸಿದ್ದಾರೆ. ಸತ್ಯದ ಬಲದಿಂದ ಅಸತ್ಯ ದೂರವಾದಂತೆ, ಪರುಷದ ಬಲದಿಂದ ಅವಲೋಹವು ಪರಿವರ್ತನೆಗೊಳ್ಳುವಂತೆ ಲಿಂಗದೇವನ ಶರಣರ ಅನುಭಾವದಿಂದ, ಒಡನಾಟದಿಂದ ಭವವು ತೊಲಗುವುದು. ಅಜ್ಞಾನಿ ಸುಜ್ಞಾನಿಯಾಗುವನು; ಪತಿತನು ಪಾವನನಾಗುವನು.

(ಮುಂದುವರಿಯುವುದು.......)



ಶರಣ ಬಂಧುಗಳಲ್ಲಿ ವಿನಂತಿ

ಕಲ್ಯಾಣ ಕಿರಣ ತಲುಪದಿದ್ದಲ್ಲಿ ನಿಮ್ಮ ಚಂದಾ ಸಂಖ್ಯೆ, ಪೂರ್ಣ ವಿಳಾಸ, ಪಿನ್‌ಕೋಡ್, ದೂರವಾಣಿ ಸಂಖ್ಯೆ ಯಾವ ತಿಂಗಳು ತಲುಪಿಲ್ಲ, ಸವಿವರವಾಗಿ ಈ ದೂರವಾಣಿ ಸಂಖ್ಯೆಗಳಿಗೆ 9738028585, 8892912123 SMS ಮುಖಾಂತರ ಕಳುಹಿಸಿರಿ. email-kalyanakirana1970@gmail.com





## ನೆನಪಿನ ಬುತ್ತಿ ಬಿಚ್ಚಿದಾಗ – 8

ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ಮಠಗಳ ನಡುವೆ ತುರುಸಿನ ಕಾಳಗ ನಡೆದಿತ್ತು. ಧಾರ್ಮಿಕವಾಗಿ ಮಾತ್ರವಲ್ಲ ರಾಜಕೀಯವಾಗಿಯೂ ಸಂಘರ್ಷ ಸಾಗಿತ್ತು. ಕಡೆಗೆ ವಿಚಾರ ಮಾಡಲಾಯಿತು. ಸಿರಿಗೆರೆ ಮಠದವರನ್ನು ಎದುರಿಸಬೇಕಾದರೆ ಚಿತ್ರದುರ್ಗದ ಬೃಹನ್ಮಠದವರಿಗೆ ಮಾತ್ರ ಸಾಧ್ಯ. ಆದ್ದರಿಂದ ಚಿತ್ರದುರ್ಗದ ಮುರುಘಾಮಠದಲ್ಲಿ ಏಕೆ ಕೇಳಬಾರದು ? ನಮ್ಮ ಚಿಕ್ಕ ತಾತ ಶಿವಣ್ಣನವರು ಆಗ ಮಠದ ವಿದ್ಯಾಸಂಸ್ಥೆಯ ಕಾರ್ಯದರ್ಶಿಯೂ ಆಗಿದ್ದರು. ಪೂಜ್ಯ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಪೀಠಾಧಿಕಾರಿಯಾಗಿದ್ದರು. ವಿಷಯ ಪ್ರಸ್ತಾಪ ಮಾಡುತ್ತಲೇ ಸಂತೋಷದಿಂದ ಖರೀದಿಸಲು ಸಿದ್ಧರಾದರು. ಹೆಚ್ಚಿನ ಬೆಲೆ ಬಾಳುತ್ತಿದ್ದರೂ ಒಂಬತ್ತು ಎಕರೆ ಜಮೀನು ಕಟ್ಟಿದ ಕಟ್ಟಡ, ದೊಡ್ಡ ಬಾವಿ ಎಲ್ಲಾ ಸೇರಿ ಕೇವಲ ಒಂದೂ ಕಾಲು ಲಕ್ಷಕ್ಕೆ ಖರೀದಿಸುವುದೆಂದು ಮಾತಾಯಿತು. ಅದರ ಭಾರ ಕಡಿಮೆಯಾದರೆ ಸಾಕಿತ್ತು. ಪೂಜ್ಯ ಅಪ್ಪಾಜಿಯವರನ್ನು ಅಪಹರಿಸಲು ಕೆಲವರಿಂದ ಸಂಚು ನಡೆದಿತ್ತು. ಚಿತ್ರದುರ್ಗ ಜಗದ್ಗುರುಗಳು ಕಾರು ಕೊಟ್ಟು ಪೂಜ್ಯ ಅಪ್ಪಾಜಿಯವರನ್ನು ಮಠಕ್ಕೆ ಕರೆಸಿಕೊಂಡರು. ಸಬ್ ರಿಜಿಸ್ಟ್ರಾರ್ ಅವರನ್ನು ಮಠಕ್ಕೆ ಕರೆಸಿಕೊಂಡು ನೋಂದಣಿ ಮಾಡಿಸಿದರು. ಆದರೆ ಅವರು ಒಂದು ಅನ್ಯಾಯ ಮಾಡಿದರು. ಒಂದೂ ಕಾಲು ಲಕ್ಷ ಮಾತನಾಡಿ ಕೇವಲ ಅರವತ್ತು ಸಾವಿರ ರೂ ಕೊಟ್ಟರು. ಏಕೆ ಹೀಗೆ ಎಂದು ನಾನು ಪ್ರತಿಭಟಿಸಿದಾಗ, "ನನ್ನ ಮೇಲೆ ವಿಶ್ವಾಸವಿಲ್ಲವೆ ? ಉಳಿದ ಹಣ ನಂತರ ಕೊಡುತ್ತೇನೆ." ಎಂದು ಉತ್ತರಿಸಿದರು. ನಂತರ ಕೊಡಲಿಲ್ಲ. ಆಡಿದ ಮಾತಿಗೆ ಬದ್ಧರಾಗಲಿಲ್ಲ.

ದಾವಣಗೆರೆ ಮಠದಲ್ಲಿ ಒಂದು ಚಿಕ್ಕ ಪ್ರಿಂಟಿಂಗ್ ಪ್ರೆಸ್ (ಟ್ರೆಡಲ್ ಮಷಿನ್) ಇತ್ತು. ಅದನ್ನು ಎಲ್ಲಿಡಬೇಕು? ನಮ್ಮದು ಅಂತ ಒಂದು ನೆಲೆ ಆದ ಮೇಲೇ ತರಿಸಿಕೊಳ್ಳಬಹುದು ಎಂದುಕೊಂಡು ಬೃಹನ್ಮಠದಲ್ಲೇ ಒಂದು ಕೋಣೆ ಕೊಡಲು ವಿನಂತಿಸಿದೆವು. ಗುರುಗಳು ಒಪ್ಪಿದರು. ಸಾಧಕ ಶಿವಾನಂದ ಗುರೂಜಿಯವರೇ ದಾವಣಗೆರೆ ಮಠದಲ್ಲಿದ್ದ ಓದುವ ಮಹತ್ವಪೂರ್ಣ ಪುಸ್ತಕಗಳನ್ನು ನಮ್ಮ ಪೂರ್ವಾಶ್ರಮದ ಮನೆಯಲ್ಲಿಟ್ಟರು ; ಪ್ರಿಂಟಿಂಗ್ ಪ್ರೆಸ್ಸನ್ನು ಬೃಹನ್ಮಠದ ಒಂದು ಕೋಣೆಯಲ್ಲಿಟ್ಟು ಬೀಗ ಹಾಕಿಕೊಂಡು ಬಂದರು.

ಇದಕ್ಕೊಂದು ಕಥೆ ಇದೆ. ನಂತರ ಧಾರವಾಡದ ಸಪ್ತಾಪುರದಲ್ಲಿ ಒಂದು ಬಾಡಿಗೆ ಮನೆ ಹಿಡಿದ ಮೇಲೆ ನಮ್ಮ ಪ್ರೆಸ್ ಹಾಕೋಣ ಎಂದು ಶಿವಾನಂದ ಗುರೂಜಿಯವರನ್ನು ಪತ್ರ ಕೊಟ್ಟು ಕಳಿಸಿದೆವು. "ನಿಮ್ಮ ಆಸ್ತಿ ಕೇಸಿಗೆ ನಮಗೆ ತುಂಬಾ ಹಣ ಖರ್ಚಾಗಿದೆ. ಆದ್ದರಿಂದ ಆ ಖರ್ಚಿಗೆ ಪ್ರಿಂಟಿಂಗ್ ಪ್ರೆಸ್ಸನ್ನು ಇಟ್ಟುಕೊಳ್ಳುತ್ತೇವೆ." ಎಂದರು ಜಗದ್ಗುರುಗಳು. ಶ್ರೀ ಶಿವಾನಂದ ಗುರೂಜಿಯವರು ಬರಿಗೈಯಿಂದ ವಾಪಸ್ಸು ಬಂದರು. ನನಗೆ ಬಹಳ ಕೋಪ ಬಂದಿತು. ಆಸ್ತಿಯ ವಿಷಯದಲ್ಲಿ 65ಸಾವಿರ ರೂಗಳ ಮೋಸ ಮಾಡಿದ್ದಲ್ಲದೆ ಪ್ರಿಂಟಿಂಗ್ ಪ್ರೆಸ್ಸನ್ನು ನುಂಗುವ ಆಲೋಚನೆ ಹೊಂದಿದ್ದಾರಲ್ಲ ಎಂದು ವಿಷಾದವೆನಿಸಿತು. ಒಂದು ಸುದೀರ್ಘವಾದ ಪತ್ರ ಬರೆದೆ. "ಏರಿ ನೀರುಣ್ಬೊಡೆ, ಬೇಲಿ ಹೊಲವ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವೊಡೆ, ತಾಯ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆ ? ಎಂಬಂತೆ ನ್ಯಾಯ ನೀತಿ ಅನುಸರಿಸಬೇಕಾದ ನೀವೇ ಹೀಗೆ ಮೋಸ ಮಾಡಲು ನಿಂತರೆ ಹೇಗೆ ? ನಾನಂತೂ ಸುಮ್ಮನೆ ಬಿಡುವುದಿಲ್ಲ. ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಿದ್ದಾರೆ. ಅವರ ಗಮನಕ್ಕೆ ತಂದು, ನಾನು ಮಠದ ಗದ್ದುಗೆ ಮುಂದೆ ಉಪವಾಸ ಮುಷ್ಕರ ಮಾಡುತ್ತೇನೆ" ಎಂದು ಪತ್ರದಲ್ಲಿ ಬರೆದು ಶ್ರೀ ಶಿವಾನಂದ ಗುರೂಜಿಯವರನ್ನು ಕಳುಹಿಸಿಕೊಟ್ಟೆವು. ಪತ್ರವನ್ನು ಓದಿ, ಗಂಭೀರವದನರಾಗಿ, "ಏನಪ್ಪಾ, ಆಯಮ್ಮ ಪತ್ರ ಬರೆದು ಕಳಿಸಿದ್ದಾರೆ. ಆಗಲಿ ನಿಮ್ಮ ವಸ್ತು ನೀವು ಒಯ್ಯಿರಿ" ಎಂದು ಹೇಳಿದರು. ಶ್ರೀ ಶಿವಾನಂದರು ಒಂದು ಲಾರಿ ಬಾಡಿಗೆ ಪಡೆದುಕೊಂಡು ಪ್ರಿಂಟಿಂಗ್ ಪ್ರೆಸ್ ತಂದರು. ಧಾರವಾಡದಲ್ಲಿ ಅದನ್ನು ಹಾಕಿದೆವು. ಅಂತೂ ಪತ್ರವು ಕೆಲಸ ಮಾಡಿತ್ತು.)

ಪೂಜ್ಯ ಅಪ್ಪಾಜಿ ಬಹಳ ಕಷ್ಟಪಟ್ಟು ಮಠ ಕಟ್ಟಿದ್ದರು. ಸನ್ಯಾಸದ ಆರಂಭದ ದಿನಗಳಲ್ಲಿ ಜನರು ಕೊಡುವ 5, 10 ರೂಪಾಯಿ ಸಹ ಅವರಿಗೆ ಮಹತ್ವಪೂರ್ಣವಾಗಿದ್ದವು. ಬಹಳ ಪರಿಶ್ರಮದಿಂದ ಕಟ್ಟಿದ ಮಠವನ್ನು ಬಿಡುವಾಗ ನಮ್ಮೆಲ್ಲರಿಗೆ ಬಹಳ ದುಃಖವಾಯಿತು. ಅಪ್ಪಾಜಿ ಹೇಳಿದರು. "ಇಂದು ಸ್ಥಾವರವನ್ನು

ಕಳೆದುಕೊಂಡೆ, ಆದರೆ ಜಂಗಮವೊಂದನ್ನು ಪಡೆದುಕೊಂಡ ಸಂತೋಷ, ಸಮಾಧಾನ ನನಗಿದೆ. ನಿಮ್ಮನ್ನು ಸಾಮಾನ್ಯ ಹೆಣ್ಣು ಎಂದು ನಾನು ತಿಳಿದಿಲ್ಲ. ಜಗತ್ತಿನಲ್ಲಿ ಹೆಂಗಸರು ಬೇಕಾದಷ್ಟು ಇರಬಹುದು. ಆದರೆ ನನ್ನ ಆಶೆ-ಆಕಾಂಕ್ಷೆ, ಶರಣರ ಆಶೋತ್ತರ ಪೂರೈಸಲು ಬಂದ ತಾಯಿ ನೀವು. ಅದನ್ನು ಪೂರೈಸುವಿರಾಗಿ ನಂಬುತ್ತೇನೆ." ಎಂದು. ಈ ಮಾತುಗಳು ನನ್ನಲ್ಲಿ ಅಚ್ಚೊತ್ತಿದವು. ಪೂಜ್ಯ ಗುರುಗಳು ಮಾಡಿದ ತ್ಯಾಗಕ್ಕಾಗಿ ನಾನು ಎಂದೆಂದೂ ಚಿರಋಣಿ. "ಒಂದು ವೇಳೆ ನನ್ನನ್ನು ತ್ಯಜಿಸಿ ಮಠವನ್ನು ಇಟ್ಟುಕೊಂಡರೂ ಹೆಚ್ಚಿನದೇನನ್ನೂ ಸಾಧಿಸಲು ತಮಗೇ ಸಾಧ್ಯವಾಗದು; ಅವರಿಂದ ಸಾಧ್ಯವಾಗದುದು ನನ್ನಿಂದ ಆಗುತ್ತದೆ." ಎಂಬ ಅಚಲ ವಿಶ್ವಾಸ ಗುರುಗಳಿಗೆ. ಅವರ ಆತ್ಮವಿಶ್ವಾಸವನ್ನು ನೆನೆಸಿಕೊಂಡರೆ ನನಗೆ ಆಶ್ಚರ್ಯವೆನಿಸುತ್ತದೆ. ಹೀಗಾಗಿ ಅವರ ತ್ಯಾಗದ ಬಗ್ಗೆ ನನ್ನಲ್ಲಿ ಕೃತಜ್ಞತೆ ಇಂದಿಗೂ, ಎಂದೆಂದಿಗೂ ತುಂಬಿ ತುಳುಕುತ್ತದೆ.

ಮಹಾರಾಷ್ಟ್ರದ ಕೊಲ್ಹಾಪುರದ ಬಳಿ ಸಿದ್ಧಗಿರಿ ಎಂಬ ಕ್ಷೇತ್ರವಿದೆ ಎಂದೂ ಅದು ಅನುಷ್ಠಾನ ಮಾಡಲಿಕ್ಕೆ ಉತ್ತಮ ಸ್ಥಳವೆಂದು ಜ್ಞಾನಪ್ರಸಾದ ಮಾಸಪತ್ರಿಕೆಯ ಸಂಪಾದಕರಾದ ಶ್ರೀ ಸಂಕನವಾಡೆ ಹೇಳಿದ ಪ್ರಕಾರ ಅಲ್ಲಿಗೆ ಹೋದೆವು. ಅದು ಕಾಡಸಿದ್ಧೇಶ್ವರ ಸಂಪ್ರದಾಯದ ವಿರಕ್ತಮಠ. ಪೂಜ್ಯ ಸ್ವಾಮೀಜಿ ಅಧ್ಯಾತ್ಮಜೀವಿ, ಸಹೃದಯರು. ನಮ್ಮ ಅನುಷ್ಠಾನ, ಅಧ್ಯಯನಕ್ಕೆ ಬೇಕಾದ ಪರಿಸರ, ವಾತಾವರಣ ಕಲ್ಪಿಸಿಕೊಟ್ಟರು. ಪ್ರಸಾದ ವ್ಯವಸ್ಥೆ ಮಾಡಿದರು. ಅತ್ಯಂತ ವಾತ್ಸಲ್ಯದಿಂದ ನಮ್ಮನ್ನು ಆದರಿಸುತ್ತಿದ್ದರು. ಪೂಜ್ಯ ಲಿಂಗಾನಂದ ಅಪ್ಪಾಜಿ ಬಗ್ಗೆ ಅತೀವ ಅಭಿಮಾನ. ಅವರು ಹುಟ್ಟಿನಿಂದ ಪಂಚಮಸಾಲಿ ಲಿಂಗಾಯತರು. ತಮ್ಮ ಉತ್ತರಾಧಿಕಾರಿ ಸಹ ಲಿಂಗಾಯತ ಪಂಚಮಸಾಲಿಯೇ ಇರಬೇಕು ಎಂದುದಾಗಿತ್ತು. ಹೀಗಾಗಿ ಪೂಜ್ಯ ಲಿಂಗಾನಂದ ಗುರುಗಳನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳಬೇಕೆಂಬ ಉತ್ಕಟ ಆಕಾಂಕ್ಷೆ ಅವರದು. ಆದರೆ ಒಂದು ಸಮಸ್ಯೆ ಎದುರಾಯಿತು. ಮಠವು ದೊಡ್ಡದು. ಆಸ್ತಿಯೂ ಅಪಾರ. ಅದಕ್ಕೆ ಭಕ್ತರ ಬಳಗವೂ ಹಿರಿದು. ಹುಣ್ಣಿಮೆಗೊಮ್ಮೆ ಮಾಸಿಕ ಸತ್ಸಂಗ ನಡೆಯುತ್ತಿತ್ತು. ಅಪಾರ ಜನ ಸೇರುತ್ತಿದ್ದರು. ಪೂಜ್ಯ ಸ್ವಾಮೀಜಿ ವಿರಕ್ತ ಸಂಪ್ರದಾಯದವರಾದರೂ ಇಷ್ಟಲಿಂಗವನ್ನು ಬಿಟ್ಟು ಅವಧೂತ ಸಂಪ್ರದಾಯವನ್ನು ಹಿಡಿದಿದ್ದರು. ಅವರ ಕರಾರು ಅವರ ಉತ್ತರಾಧಿಕಾರಿಯೂ ಇಷ್ಟಲಿಂಗವನ್ನು ತೊರೆಯಬೇಕು ಎಂಬುದು. ಪೂಜ್ಯ ಅಪ್ಪಾಜಿ ಒಪ್ಪಲಿಲ್ಲ, "ನಾನು ಮಠಕ್ಕಾಗಿ ಸನ್ಯಾಸಿಯಾಗಿಲ್ಲ. ಇಷ್ಟಲಿಂಗದ ಪ್ರಚಾರಕ್ಕಾಗಿಯೇ ಸನ್ಯಾಸಿಯಾಗಿದ್ದೇನೆ. ಅದಕ್ಕಾಗಿಯೇ ಲಿಂಗಾನಂದ ಎಂದು ಹೆಸರನ್ನು ಇಟ್ಟುಕೊಂಡಿದ್ದೇನೆ." ಎಂದು ಸಿದ್ಧಗಿರಿ ಮಠದ ಉತ್ತರಾಧಿಕಾರತ್ವವನ್ನು ನಿರಾಕರಿಸಿದರು. ನಂತರ ಕೂಡ ಪೂಜ್ಯ ಸ್ವಾಮೀಜಿ ಮೈಸೂರಿಗೆ ಹೋಗುವಾಗ ಒಮ್ಮೆ ಬಸವ ಗಂಗೋತ್ರಿಯಲ್ಲಿ ಭೇಟಿಯಾಗಿದ್ದರು. ಸುತ್ತೂರು ಶ್ರೀಗಳ ಬಳಿ ಯಾರಾದರೂ ವಟುಗಳು ಸಿಕ್ಕುವರೇನೋ ಎಂದು ಅನ್ವೇಷಣೆಗೆ ಹೊರಟಿದ್ದರು.

ಸಿದ್ಧಗಿರಿಯಲ್ಲಿ ಸುಮಾರು 2-3 ತಿಂಗಳು ಅನುಷ್ಠಾನ ಮಾಡಿದೆವು. ಆ ಸಂದರ್ಭದಲ್ಲಿ "ಸಚ್ಚಿದಾನಂದ ದರ್ಶನ" ಮತ್ತು "ಶಿವಯೋಗಿಣಿ" ಎಂಬ ಎರಡು ಕೃತಿಗಳನ್ನು ಬರೆದೆ. ಅಲ್ಲಿರುವಾಗಲೇ 'ಕೋಡ್ಲಿ' ಎಂಬ ಊರಿನಿಂದ ಪ್ರವಚನಕ್ಕೆ ಆಮಂತ್ರಣ ಬಂದಿತು. ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೋಕಿನ ಒಂದು ಗ್ರಾಮವದು. ಪೂಜ್ಯ ಅಪ್ಪಾಜಿ ಪ್ರವಚನ ಮಾಡುತ್ತಿದ್ದರು. ಅದೇ ವಿಷಯವನ್ನು ನಾನು ಸರಸರನೆ ವಚನಗಳ ರೂಪದಲ್ಲಿ ಬರೆಯುತ್ತಿದ್ದೆ. ಹೀಗಾಗಿ "ವಚನ ಸುಧಾ" ಎಂಬ ವಚನಗ್ರಂಥವೊಂದು ಸಿದ್ಧವಾಯಿತು. ನನ್ನ ಜೀವಮಾನದಲ್ಲಿ ಪೂಜ್ಯ ಅಪ್ಪಾಜಿಯವರ ಸಮಗ್ರ ಪ್ರವಚನ ಕೇಳಿದ್ದು ಅದೇ ಊರಿನಲ್ಲೇ. ನಂತರ ಕೇಳುವ ಅವಕಾಶವೇ ಸಿಕ್ಕಲಿಲ್ಲ. ಕೋಡ್ಲಿ ಪ್ರವಚನ ಮುಕ್ತಾಯ ಸಮಾರಂಭಕ್ಕೆ ಅಂದಿನ ಲೋಕೋಪಯೋಗಿ ಸಚಿವರಾದ ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಅದಕ್ಕೆ ಮೊದಲು ಒಂದು ಪ್ರಸಂಗ ಜರುಗಿತು.

ಚುನಾವಣೆಯಲ್ಲಿ ಇವರಿಗಾಗಿ ಶ್ರಮಿಸಿದ ಕಾರ್ಯಕರ್ತರಿಗೆ ಸತ್ಕಾರ ಸಮಾರಂಭವಿತ್ತು. ಪೂಜ್ಯ ಅಪ್ಪಾಜಿಯವರ ದಿವ್ಯ ಸನ್ನಿಧಿಯಲ್ಲೇ ಆ ಸಮಾರಂಭ ಏರ್ಪಾಡಾಗಿತ್ತು. ಪೂಜ್ಯರು ಲಿಂಗಾಯತ ಧರ್ಮದ ಸ್ವರೂಪ ಕುರಿತು ಹೇಳಿದ್ದಲ್ಲದೆ ಇಷ್ಟಲಿಂಗದ ಮಹತ್ವ, ಲಿಂಗಾಯತತ್ವ ಬರುವುದು ಇಷ್ಟಲಿಂಗ ಧಾರಣೆಯಿಂದ ಎಂದು ವಿವರಿಸಿದರು. ಅದರಿಂದ ಪ್ರಭಾವಿತರಾದ ಶ್ರೀ ವೀರೇಂದ್ರ ಪಾಟೀಲರು ಹೇಳಿದರು. "ನಾವು ಮಂತ್ರಿಗಳು ಬರುತ್ತೇವೆ ಎಂದರೆ ಮಾಲೆ ಹಿಡಿದು ಮಠಾಧಿಕಾರಿಗಳು ಕಾಯುತ್ತಾರೆ. ನಮ್ಮ ತಪ್ಪುಗಳನ್ನು ಎತ್ತಿ ತೋರಿಸುವುದಿಲ್ಲ. ಧಾರ್ಮಿಕವಾಗಿ ರಾಜಕೀಯವಾಗಿ ಏನು ತಪ್ಪು ಮಾಡುತ್ತೇವೆ ಎಂದು ಹೇಳುವುದಿಲ್ಲ. ಪೂಜ್ಯ ಸ್ವಾಮೀಜಿಯವರು ನಿರ್ಭಯವಾಗಿ ಹೇಳಿ ಗುರುವಿನ ಕರ್ತವ್ಯ







ಮಾಡಿದ್ದಾರೆ. ಇದರಿಂದ ನನಗೆ ಸಂತೋಷವಾಗಿದೆ." ಕಾರ್ಯಕ್ರಮದ ನಂತರ ಪೂಜ್ಯರನ್ನು ಮನೆಗೆ ಬರಮಾಡಿಕೊಂಡು ಪಾದಪೂಜೆ ಮಾಡಿ, ಪ್ರಸಾದ ಮಾಡಿಸಿ, ಕಾಣಿಕೆ ನೀಡಿದರು.

ಕೋಡ್ಲಿ ಪ್ರವಚನ ನಡೆಯುವ ಕಾಲದಲ್ಲಿ ಒಂದು ದಿವಸ ರಾತ್ರಿ ಕನಸೊಂದು ಬಿದ್ದಿತು. ಇದು ನಮ್ಮ ಜೀವನಕ್ಕೆ ಹೊಸ ತಿರುವು ನೀಡಿತು. ಆ ಕನಸಿನಲ್ಲಿ ನನಗೊಂದು ವಾಣಿಯು ಕೇಳಿಬಂತು. "ನೀನು ಎಂ.ಎ ಓದಬೇಕು" ಎಂಬುದೇ ಆ ವಾಣಿಯ ಸಾರಾಂಶ. ನಾನು ಬಿಎಸ್‌ಸಿ ಪದವಿ ಮುಗಿಸಿದ ನಂತರ ಪೂಜ್ಯ ಗುರುಗಳ ಸನ್ನಿಧಿಗೆ ಬಂದು ಕಾವಿ ದೀಕ್ಷೆಯನ್ನು ಪಡೆದಾಗಿತ್ತು. ಪುನಃ ವಿಶ್ವವಿದ್ಯಾಲಯಕ್ಕೆ ಹೋಗಿ ಓದುವುದು ಮುಜುಗರದ ವಿಷಯವಾಗಿತ್ತು. ನನಗೇಕೆ ಬೇಕು ಪದವಿ ಮೋಹ ? ಎಂದುಕೊಂಡು ಕನಸಿನ ವಿಷಯ ಉದಾಸೀನ ಮಾಡಿದೆ. ಪುನಃ ಅದೇ ರೀತಿ ವಾಣಿಯಾಯಿತು. ನಮ್ಮ ಜೀವನ ಗಾಳಿಪಟದಂತೆ, ಅದರ ಸೂತ್ರ ಆ ದೇವನ ಕೈಯಲ್ಲಿ ಎಂಬ ಭಾವ ಬರುವಂತೆ ಒತ್ತಡ ಜಾಸ್ತಿಯಾಯಿತು. ಏನು ಓದಬೇಕು? ಎಂದು ಉಭಯತರೂ ಚಿಂತಿಸುವಾಗಲೇ ಎಂ.ಎ. ಫಿಲಾಸಫಿ ಓದಬೇಕು ಎಂದು ಮತ್ತೊಂದು ಆದೇಶವಾಯಿತು. ಮೊದಲು ನಾನು ಓದಿದ್ದು ಬಿಎಸ್‌ಸಿ ಎಲ್ಲಿ ಓದಬೇಕು ? ಮೈಸೂರು, ಧಾರವಾಡ, ಬೆಂಗಳೂರು, ಹೈದರಾಬಾದ್ ಈ ನಾಲ್ಕು ಊರುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದುಕೊಂಡೆವು. ಶ್ರೀ ಡಾ॥ ವಿ.ಕೆ.ಗೋಕಾಕ್ ಅವರು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. ಬೆಂಗಳೂರು ವಿ.ವಿ.ಯಲ್ಲಿ ತತ್ತ್ವಜ್ಞಾನ ವಿಭಾಗವಿಲ್ಲ ಎಂದು ಸ್ವತಃ ತಿಳಿಸಿದರು. ಅಷ್ಟರಲ್ಲಿ ಮತ್ತೊಂದು ಕನಸಾಯಿತು. ಅದರಲ್ಲಿ ಒಂದು ಭವ್ಯವಾದ ಕಟ್ಟಡದ ಚಿತ್ರ ಮೂಡಿ ಬಂದಿತು. ಅದರ ಮುಂದೆ ನಾನು ನಿಂತಂತೆ. "ಇದು ಕರ್ನಾಟಕ ವಿಶ್ವವಿದ್ಯಾಲಯ, ಇಲ್ಲಿ ನೀನು ಓದಬೇಕು" ಎಂಬ ವಾಣಿ ಕೇಳಿಬಂದಿತು. ಅದನ್ನು ನಾನು ಪೂಜ್ಯ ಗುರೂಜಿಯವರಿಗೆ ಹೇಳಿದೆ. ಅವರಿಗೂ ಸಂತೋಷವಾಯಿತು. ಏಕೆಂದರೆ ಧಾರವಾಡ ಪೂಜ್ಯರಿಗೂ ಪರಿಚಿತವಿದ್ದ ಸ್ಥಳವಾಗಿತ್ತು. ನಾನು ಬರೆದಿದ್ದ ಮಾತೃವಾಣಿ, ವಿರಹ ತರಂಗ ಕೃತಿಗಳನ್ನು ಡಾ॥ ವಿ.ಕೆ.ಗೋಕಾಕ್ ಅವರಿಗೆ, ಡಾ॥ ಡಿ.ಸಿ.ಪಾವಟೆಯವರಿಗೆ , ಮೈಸೂರು ವಿ.ವಿ.ಯ ಉಪಕುಲಪತಿಗಳಿಗೆ ಕಳಿಸಿದ್ದೆ. ಡಾ॥ ಗೋಕಾಕ್ ಅವರು ಮಾರುತ್ತರ ಬರೆದಿದ್ದರು. ಡಾ॥ ಡಿ.ಸಿ.ಪಾವಟೆಯವರು ಪತ್ರ ಬರೆದಿದ್ದರು. "ನಿಮಗೆ ತತ್ತ್ವಜ್ಞಾನ ಎಂ.ಎ. ಗೆ ಪ್ರವೇಶಕೊಡಲು ನಮಗೆ ಹೆಮ್ಮೆ ಎನಿಸುತ್ತದೆ." ಎಂದಿದ್ದರು. ಧಾರವಾಡಕ್ಕೆ ಬಂದು ಸಪ್ತಾಪುರದಲ್ಲಿ ಒಂದು ಬಾಡಿಗೆ ಮನೆ ಪಡೆದು ಎಂ.ಎ ತತ್ತ್ವಜ್ಞಾನ ತರಗತಿಗೆ ಪ್ರವೇಶ ಮಾಡಿಸಿದೆ. ಈಗಾಗಲೇ ತಿಳಿಸಿದಂತೆ ಒಂದು ವಿಶೇಷ ಪ್ರಯತ್ನ ಮಾಡಿ ಚಿತ್ರದುರ್ಗದಿಂದ ಪ್ರಿಂಟಿಂಗ್ ಪ್ರೆಸ್ ತರಿಸಿಕೊಂಡು ಬಾಡಿಗೆ ಮನೆಯಲ್ಲಿ ಹಾಕಿಸಿದೆವು. ಪೂಜ್ಯ ಗುರೂಜಿ ಪ್ರವಚನ ಮಾಡುತ್ತ ಸಂಚಾರ ಆರಂಭಿಸಿದರು.

ಧಾರವಾಡಕ್ಕೆ ನಾವು ಬಂದುದು 1967 ಮೇ ಒಂದರಂದು. ಒಂದು ಜಾಗದಲ್ಲಿ ನೆಲೆ ನಿಂತಂತಾಗಿ ಮುಂದಿನ ಯೋಜನೆ ರೂಪಿಸಲು ಸದವಕಾಶ ದೊರೆತಿತು. ಆ ವರ್ಷ ಕರ್ನಾಟಕ ಸರ್ಕಾರದವರು ಬಸವೇಶ್ವರ ಅಷ್ಟಶತಮಾನೋತ್ಸವ ಆಚರಿಸುವ ಯೋಜನೆ ಹಾಕಿದ್ದರು. ಅದರ ನಿಮಿತ್ತ ಬಸವ ಕಲ್ಯಾಣ, ಕೂಡಲಸಂಗಮಗಳಲ್ಲಿ ಭವ್ಯ ಸಮಾರಂಭ ಏರ್ಪಡಿಸಲಾಗಿತ್ತು.

"ಬಸವೇಶ್ವರ ಅಷ್ಟಶತಮಾನೋತ್ಸವಕ್ಕೆ ಯಾವುದಾದರೊಂದು ಪುಸ್ತಕ ಬಿಡುಗಡೆ ಮಾಡಿರಿ" ಎಂದು ಪೂಜ್ಯ ಅಪ್ಪಾಜಿ ಪ್ರೇರಣೆ ನೀಡಿದರು. ಬರೆಯುತ್ತ ಬರೆಯುತ್ತಲೇ ನಮ್ಮ ಚಿಕ್ಕ ಪ್ರೆಸ್ಸಿನಲ್ಲೇ ಮುದ್ರಣಸಹ ಆರಂಭಿಸಿದೆವು. ಮುಗಿಯುವ ಹೊತ್ತಿಗೆ ಅದು 800 ಪುಟಗಳ ಪುಸ್ತಕ ಆಯಿತು. ಪೂಜ್ಯ ಅಪ್ಪಾಜಿ ಬಳ್ಳಾರಿಯಲ್ಲಿ ಪ್ರವಚನ ಮಾಡುತ್ತಿದ್ದರು. ಮುಕ್ತಾಯ ಸಮಾರಂಭಕ್ಕೆ ನಾನೂ ಹೋದೆ. ಪ್ರವಚನ ಮುಕ್ತಾಯ ಮಾಡಿ ಬಳ್ಳಾರಿಯಿಂದ ಒಂದು ಬಸ್ ಜನರನ್ನು ಕರೆದುಕೊಂಡು ಬಸವ ಕಲ್ಯಾಣಕ್ಕೆ ಹೋದೆವು.

ಅಂದು 26-12-1967 ಶ್ರೀ ಬಸವೇಶ್ವರ ಅಷ್ಟಶತಮಾನೋತ್ಸವ ಕಾರ್ಯಕ್ರಮದ ಉದ್ಘಾಟನೆ ಇದ್ದಿತು. ಶ್ರೀ ವಿ.ವಿ. ಗಿರಿಯವರು, ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಮುಖ್ಯ ಸ್ಥಾನದಲ್ಲಿದ್ದರು. ನಾನು ಶ್ರೀ ಬಿ.ಡಿ.ಜತ್ತಿಯವರನ್ನು ಕಂಡು "ಬಸವ ತತ್ತ್ವ ದರ್ಶನ" ಪುಸ್ತಕ ಬಿಡುಗಡೆ ಮಾಡಿಸಿಕೊಡಬೇಕೆಂದು ಕೇಳಿಕೊಂಡೆ. ಅವರು ಸಂತೋಷದಿಂದ ಶ್ರೀ ನಿಜಲಿಂಗಪ್ಪನವರಿಗೆ ಪರಿಚಯಿಸಿದರು. "ಯಾವ ಊರಿನವರು ?" ನಿಜಲಿಂಗಪ್ಪನವರು ಕೇಳಿದರು. "ಚಿತ್ರದುರ್ಗದವರು"

"ಓಹೋ ನಮ್ಮೂರಿನವರೆ ! ಯಾರ ಮನೆ ?

"ವಕೀಲ ಬಿ.ಟಿ.ಶಿವಣ್ಣನವರ ಮೊಮ್ಮಗಳು.

"ನಮ್ಮ ಶಿವಣ್ಣ, ಡಾ॥ ಬಸಪ್ಪನವರ ಮಗಳೆ ?

"ಅಹುದು". ನಿಜಲಿಂಗಪ್ಪನವರ ಮನೆಯ ಪಕ್ಕ ಕೊಂಡಜ್ಜಿ ಬಸಪ್ಪ ಅವರ ಪಕ್ಕದ ಬಾಡಿಗೆ ಮನೆಯಲ್ಲಿ ಕೆಲವು ಕಾಲ ಶಿವಣ್ಣನವರು ಇದ್ದರು.

"ನಮ್ಮ ಕಣ್ಣೆದುರಿಗೇ ಬೆಳೆದ ಇಷ್ಟು ಚಿಕ್ಕ ಹುಡುಗಿ ಎಂಥಾ ದೊಡ್ಡ ಪುಸ್ತಕ ಬರೆದಿದ್ದೀಯ?" ಎಂದು ಅಭಿಮಾನಪಟ್ಟು ಅದನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮ ಪಟ್ಟಿಯಲ್ಲಿ ಇಲ್ಲದಿದ್ದರೂ ಬಸವೇಶ್ವರ ಅಷ್ಟಶತಮಾನೋತ್ಸವದ ಉದ್ಘಾಟನಾ ಸಮಾರಂಭದಲ್ಲಿ "ಬಸವ ತತ್ತ್ವ ದರ್ಶನ" ಗ್ರಂಥ ಬಿಡುಗಡೆಯಾದುದು ಬಸವ ಸಂಕಲ್ಪವೇ ಇರಬೇಕು.

ದಿ. 28-12-1967ರಂದು "ಮಹಿಳಾಗೋಷ್ಠಿ" ವೇದಿಕೆಯ ಮೇಲೆ ಮಹಿಳಾ ಭಾಷಣಕಾರರು. ಸನ್ನಿಧಿ ವಹಿಸಿದ್ದವರು ಮಾತ್ರ ಚಿತ್ರದುರ್ಗದ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಮತ್ತು ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು. ನನ್ನನ್ನು ನೋಡಿ ಭಾಷಣಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಜನರಿಂದ ಬೇಡಿಕೆ ಬಂದಿತು. ಆದರೆ ಕಾರ್ಯಕ್ರಮ ಪಟ್ಟಿಯಲ್ಲಿ ನನ್ನ ಹೆಸರಿಲ್ಲವೆಂದು ಕಾರ್ಯಕ್ರಮ ನಿರೂಪಕ ಮಹಿಳಾ ಮಣಿಯರು ನಿರಾಕರಿಸುತ್ತಿದ್ದರು. ಜನರ ಒತ್ತಾಯ ಜಾಸ್ತಿಯಾಯಿತು. ಐದು ನಿಮಿಷ ಕೊಟ್ಟರು. ನಾವೇನೂ ಆ ಬಗ್ಗೆ ಪೂರ್ವಭಾವಿ ಚಿಂತನೆ ಮಾಡಿರಲಿಲ್ಲ. ನನಗೇ ಅರಿವಾಗದಂತೆ ನಾನು ಅಂತಃಸ್ಫುರಣದಂತೆ ಮಾತನಾಡಿದೆ. ಇಷ್ಟು ದಿನ ಪುರುಷರ ಗೋಷ್ಠಿಗಳಿದ್ದವು. ಅವಕ್ಕೆ ಪುರುಷ ಜಗದ್ಗುರುಗಳು ಸನ್ನಿಧಿ ವಹಿಸುವುದು ಸ್ವಾಭಾವಿಕ. ಇದು ಮಹಿಳಾಗೋಷ್ಠಿ. ಇದಕ್ಕೂ ಪುರುಷ ಜಗದ್ಗುರುಗಳೇ ಸನ್ನಿಧಿ ವಹಿಸಿರುವುದು ಏಕೆ ? ಅವರಾದರೂ ಏನು ಮಾಡುತ್ತಾರೆ. ಮಹಿಳಾ ಗುರುಗಳು ಇಲ್ಲ. ಅಪ್ಪ ಬಸವಣ್ಣನವರು ಸ್ತ್ರೀ ಪುರುಷರಿಬ್ಬರಿಗೆ ಸಮಾನ ಅವಕಾಶವನ್ನು ಕೊಟ್ಟರು. ಪುರುಷ ಜಗದ್ಗುರುಗಳ ಪರಂಪರೆ ಮುಂದುವರಿದು ಬಂದಂತೆ ಸ್ತ್ರೀ ಜಗದ್ಗುರುಗಳ ಪರಂಪರೆ ಮುಂದುವರಿದು ಬರಲಿಲ್ಲ. ಅಪ್ಪ ಬಸವಣ್ಣನವರ ತತ್ತ್ವವನ್ನು ಅನುಷ್ಠಾನ ಮಾಡಲೋಸುಗ ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸಲಾಗುವುದು" ನಾನು ಹೀಗೆ ಹೇಳುತ್ತಲೇ ಸಭೆಯಲ್ಲಿ ಕಿವಿ ಗಡಚಿಕ್ಕುವಂತೆ ಚಪ್ಪಾಳೆ ಕೇಳಿ ಬಂದವು. ಜನರು ಉದ್ಗಾರ ತೆಗೆದರು. ಸಿಟ್ಟಿಗೆದ್ದವರೆಂದರೆ ಸನ್ನಿಧಿ ವಹಿಸಿದ್ದ ಇಬ್ಬರು ಜಗದ್ಗುರುಗಳು ಮತ್ತು ಶ್ರೀ ಬಿ.ಶಿವಮೂರ್ತಿ ಶಾಸ್ತ್ರಿಗಳು. ನನ್ನ ಮಾತನ್ನು ಕೇಳಿ ಪೂಜ್ಯ ಅಪ್ಪಾಜಿ ಸಹ ಬೆಚ್ಚಿಬಿದ್ದರು. ಇದು ಅನಿರೀಕ್ಷಿತ ಹೇಳಿಕೆಯಾಗಿತ್ತು. ಕಾರ್ಯಕ್ರಮ ಮುಗಿಯುತ್ತಲೇ ಶಾಸ್ತ್ರಿಗಳು ಗುರುಗಳ ಬಳಿ ಬುಸುಗುಡುತ್ತ ಹೋದರು. "ಏನ್ರಿ ನಿಮ್ಮ ಶಿಷ್ಯರು ಏನೇನೋ ಮಾತನಾಡಿಬಿಟ್ಟರು?" ಎಂದು ಕೇಳಿದರು. ಅನಿರೀಕ್ಷಿತ ಹೇಳಿಕೆಯಾಗಿದ್ದರೂ ಪೂಜ್ಯ ಅಪ್ಪಾಜಿ ಗಾಬರಿಗೊಳ್ಳದೆ "ಏನು ಮಾತನಾಡಿದ್ದಾರೆ ? ಸರಿಯಾಗೆ ಮಾತನಾಡಿದ್ದಾರೆ." ಎಂದು ಹೇಳಿದರು. – "ಹೆಣ್ಣು ಮಕ್ಕಳಿಗೆ ಗುರು ಪೀಠವೆ? ಅದು ಹೇಗೆ ಸಾಧ್ಯ?" ಶಾಸ್ತ್ರಿಗಳ ಕೋಪದ ಪ್ರಶ್ನೆ. "ಏಕೆ ಸಾಧ್ಯವಿಲ್ಲ, ಮಾಡಿ ತೋರಿಸುತ್ತೇವೆ ನೋಡಿರಿ" ಗುರುಗಳಿಂದ ದಿಟ್ಟ ಉತ್ತರ. ಬೇರೆ ಯಾರಾದರೂ ಆಗಿದ್ದರೆ, "ನಮ್ಮ ಶಿಷ್ಯರಿಂದ ತಪ್ಪಾಗಿದೆ ಕ್ಷಮಿಸಿಬಿಡಿ, ಸಣ್ಣ ವಯಸ್ಸು, ಬಿಸಿ ರಕ್ತ, ಆವೇಶದಲ್ಲಿ ಹೇಳಿರಬಹುದು." ಎನ್ನುತ್ತಿದ್ದರೇನೋ! ಪೂಜ್ಯ ಲಿಂಗಾನಂದ ಸ್ವಾಮಿಗಳ ಧೀಮಂತಿಕೆ ಇರುವುದೇ ಆ ಧೈರ್ಯದಲ್ಲಿ. ಕಾರ್ಯಕ್ರಮ ಮುಗಿದ ಮೇಲೆ ಶರಣ ಬಾಬಾಸಾಹೇಬ ವಾರದ ಮುಂತಾದ ಮುಖಂಡರು ನನ್ನ ಹೇಳಿಕೆಯನ್ನು ಅಭಿನಂದಿಸಿದರು.

ಬಸವ ಕಲ್ಯಾಣದ ಆ ಶರಣಭೂಮಿಯಲ್ಲಿ ನನ್ನ ಬಾಯಿಂದ ಹೇಳಿಸಿರುವುದು ಆ ಬಸವ ಶಕ್ತಿಯೆ. ಬಸವಾದಿ ಪ್ರಮಥರ ಸಂಕಲ್ಪ, ಆಸೆಗಳು ಅವರೊಡನೆಯೇ ಹೋಗಿರದೆ ನಿಸರ್ಗದಲ್ಲಿ ಸುಪ್ತವಾಗಿ ಉಳಿದಿರುತ್ತವೆ. ಮೊದಲನೆಯ ಮಳೆಬಿದ್ದಾಗ ಸೂರ್ಯಕಾಂತಿಯ ಗಿಡಗಳು ಒಮ್ಮೆ ಹುಟ್ಟಿಕೊಂಡವು. ನಾವೇನೂ ಬೀಜ ಹಾಕಿರಲಿಲ್ಲ. ಆ ಬೀಜ ಯಾವುವೆಂದರೆ ಹಿಂದಿನ ವರ್ಷ ಹಾಕಿದ ಗಿಡದ ತೆನೆಯಿಂದ ಉದುರಿ ಬಿದ್ದಿದ್ದವು. ಮಣ್ಣಿನಲ್ಲಿ ಸುಪ್ತವಾಗಿದ್ದು ಮಳೆ ಬೀಳುತ್ತಲೇ ಮೊಳಕೆಯೊಡೆದಿವೆ. ಹಾಗೆ ಗುರು ಬಸವಣ್ಣನವರ ಆಸೆಯು ನನ್ನ ಮೂಲಕ-ಗ್ರಹಿಸಿಕೊಳ್ಳುವ ಹೃದಯ ಸಿಕ್ಕಾಗ ಅಭಿವ್ಯಕ್ತವಾಗಿದೆ. ಮಹಿಳೆ ಗುರುವಾಗುವ ಕುರಿತು ಚರ್ಚೆ ಶುರುವಾಯಿತು. ಬಸವ ಕಲ್ಯಾಣದಲ್ಲಿ ಆಡಿದ ಮಾತು ಎಲ್ಲರ ಗಮನವನ್ನು ಸೆಳೆದು ಬಿಟ್ಟವು.

(ಮುಂದುವರಿಯುವುದು.....)







## ಮೇರು ಗಿರಿ ಮಾತಾಜಿ -ಭಾಗ 1

- ಲೀಲಾವತಿ ನಾಡಗೌಡರು

ಮಾತಾಜಿ ಎಂಬ ಬಸವ ಜ್ಯೋತಿ
ಧರೆಗೆ ಇಳಿದು ಬಂದಿತು
ಮನುಜತೆಯ ತಿಮಿರ ಕಳೆದು
ಜ್ಞಾನ ಬೆಳಕು ಚಿಮ್ಮಿತು
ತಾವು ದಿಟ್ಟ ಹೆಜ್ಜೆ ಇಟ್ಟು
ಬಸವ ತತ್ವ ಸಾರ್ದಿರಿ
ಮೂಢ ಜನತೆ ಕೊಟ್ಟ ಪೆಟ್ಟು
ಸಹಿಸಿ ಸತ್ಯ ತಿಳಿಸಿದಿರಿ
ತಾವು ಗೈದ ಸಾಧನೆಗಳು
ಇತಿಹಾಸದ ಪುಟ ಸೇರುತ್ತಲಿಹವು
ತಮ್ಮ ಬದುಕು ಸಾರ್ಥಕ, ಮಾತೆ ತಾವು ಸೋಜಿಗ !

ಪೂಜ್ಯರೆ,

ತಮ್ಮ ಬಗ್ಗೆ ಏನೇ ಬರೆಯಲಿ, ಏನೇ ಹೇಳಲಿ ಅದೆಲ್ಲ ದಿವ್ಯ ಸಂತಸವನ್ನು ಕೊಡುವುದು. ಜಗತ್ತಿನ ಏಳು ಅದ್ಭುತಗಳ ಸಾಲಿನಲ್ಲಿ ತಾವು ಎಂಟನೆಯ ಅದ್ಭುತವಾಗಿ, ತಮ್ಮ ಬದುಕನ್ನು ರೂಪಿಸಿಕೊಂಡಿರಿ. ಯಾರೂ ತುಳಿಯದ ದಾರಿಯಲ್ಲಿ ಬಸವ ತತ್ವ ಸಾರಲು ದೃಢತೆಯಿಂದ ಹೆಜ್ಜೆ ಇಟ್ಟಿರಿ. ಇದೇ ತಮಗೆ ಗುರಿಯಾಗಿತ್ತು. ಆದರೆ ಆ ಗುರಿಗೆ ಲಿಂಗಾನಂದ ಅಪ್ಪಾಜಿ ಎಂಬ ಗುರುವಿದ್ದರು.

ಮುಂದೊಂದು ಗುರಿ ಇತ್ತು. ಬಸವ ತತ್ತ್ವ ಪಸರಿಸಲು
ಹಿಂದೊಬ್ಬ ಗುರುವಿದ್ದರು ಪೂಜ್ಯ ಲಿಂಗಾನಂದ ಅಪ್ಪಾಜಿಯವರು
ಸಾಗಿತು ಧೀರ ಶರಣರ ದಂಡು
ಆದರೆ ಮುಂದೆ ಗುರಿ ಇಲ್ಲದಿರೆ,
ಹಿಂದೆ ಗುರುವಿಲ್ಲದಿರೆ ಸಾಗುವುದು ರಣಹೇಡಿಗಳ ಹಿಂಡು.

ಗುರಿಯ ಬೆನ್ನು ಹತ್ತಿ ಹೊರಟಾಗ ತಮ್ಮ ಪಥ ಮುಳ್ಳಿನ ಹಾಸಿಗೆಯಾಗಿತ್ತು. ಮೌಢ್ಯತೆಯನ್ನು ಕಿತ್ತುವಾಗ ತಮಗೆ ಮುಳ್ಳುಗಳು ಚುಚ್ಚಿದವು. ಎಲ್ಲವನ್ನೂ ಸಹಿಸಿ ತಾವು ಗೈದ ಸಾಧನೆಗಳು ಒಂದೊಂದು ಅದ್ಭುತ ಪವಾಡಗಳಂತೆ ಗೋಚರವಾಗುತ್ತವೆ. ಅವನ್ನು ಬಿಚ್ಚಿ ಇಡುವ ಪ್ರಯತ್ನ ನನ್ನದು.

1. ಬಸವಣ್ಣನೇ ಧರ್ಮಗುರು ಎಂದು ಐತಿಹಾಸಿಕ ಸತ್ಯವನ್ನು ಎಳೆಎಳೆಯಾಗಿ, ವಚನಗಳ ಆಧಾರ ಸಹಿತ ಬಿಚ್ಚಿ ಇಟ್ಟು, ಸಾಧಿಸಿ ತೋರಿಸಿದ ಮಹಾನ್ ಶಕ್ತಿ ತಾವು.

2. ಇಷ್ಟಲಿಂಗಜನಕ ಬಸವಣ್ಣನೆಂದು ವಚನ ಸಾಹಿತ್ಯದ ಆಧಾರದ ಮೂಲಕ ತೋರಿಸಿಕೊಟ್ಟಿರಿ. ಇಷ್ಟಲಿಂಗ ಜನಕ ಬಸವಣ್ಣ ಎಂಬ ಪುಸ್ತಕವನ್ನು ಬರೆದು ಸತ್ಯವನ್ನು ಗಟ್ಟಿಗೊಳಿಸಿದಿರಿ. ಬಸವ ಸಾಮ್ರಾಜ್ಯದಲ್ಲಿ ಭಕ್ತ ವೃಂದವನ್ನು ಕರೆದೊಯ್ದಿರಿ.

3. ಬಸವ ಕಲ್ಯಾಣದಲ್ಲಿ ಬಸವಣ್ಣವರ ಅಷ್ಟಶತಮಾನೋತ್ಸವ ಕಾರ್ಯಕ್ರಮದ ತುಂಬಿದ ಸಭೆಯಲ್ಲಿ ಗುರು ಬಸವಣ್ಣನವರ ಸಮಾನತಾ ತತ್ತ್ವವನ್ನು ಪೂರ್ಣರೂಪದಲ್ಲಿ ಆಚರಣೆಗೆ ತರಲು. ಮಹಿಳಾ ಗುರು ಪೀಠವನ್ನು ಸ್ಥಾಪಿಸುತ್ತೇವೆ ಎಂದು ಘೋಷಿಸಿದಿರಿ. ಬಸವ ತತ್ತ್ವಾಭಿಮಾನಿಗಳು ಸಂತೋಷದಿಂದ ಕಿವಿ ಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ಆದರೆ ಸಭೆಯಲ್ಲಿ ಆಸೀನರಾಗಿದ್ದ ಸಂಪ್ರದಾಯ ಮಠದ ಸ್ವಾಮಿಗಳು, ಶಾಸ್ತ್ರಿ ಪಂಡಿತರು ಸ್ತ್ರೀ ಗುರುವಾಗುವ ಪರಿಕಲ್ಪನೆಯನ್ನೇ ವಿರೋಧಿಸಿದರು. ನಂತರದ ದಿನಗಳಲ್ಲಿ ಪೂಜ್ಯ

ಅಪ್ಪಾಜಿಯವರ ಮಾರ್ಗದರ್ಶನದಲ್ಲಿ, ಧಾರವಾಡದಲ್ಲಿ ಸ್ತ್ರೀ ಜಗದ್ಗುರು ಅಕ್ಕಮಹಾದೇವಿ ಅನುಭಾವ ಪೀಠವನ್ನೇರಿ ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತೆ ಮಾಡಿದಿರಿ. ವಿಶ್ವದ ಮೊಟ್ಟ ಮೊದಲನೆಯ ಸ್ತ್ರೀ ಜಗದ್ಗುರುವಾಗಿ, ಪುರುಷ ವರ್ಗವು ಸಾಧಿಸಲಾರದ್ದನ್ನು ಹೆಜ್ಜೆ ಹೆಜ್ಜೆಗೂ ಸಾಧಿಸಿದಿರಿ. ಆವಾಗಲೂ ಸಮಾಜ ಪ್ರೋತ್ಸಾಹ ಕೊಡಲಿಲ್ಲ. ಸ್ತ್ರೀ ಗುರುವಾಗಲು ಹೇಗೆ ಸಾಧ್ಯ? ಎಂದು ಪ್ರತಿರೋಧ ಮಾಡಿದರೂ ಬೆಚ್ಚಲಿಲ್ಲ ಬೆದರಲಿಲ್ಲ ಮುಂದೆ ಇಟ್ಟ ಹೆಜ್ಜೆಯನ್ನೂ ಎಂದೂ ಹಿಂದೆ ಇಡಲಿಲ್ಲ. ಮುಂದೆ ಅದೇ ಸಮಾಜ ಒಳಗೊಳಗೆ ಮೆಚ್ಚಿಕೊಂಡಿತು. ತಾವು ತಮ್ಮ ಅಂತರಂಗ ಸಾಕ್ಷಿಯಾಗಿ ಬಸವ ಸೇವೆಗೈಯುತ್ತಿರುವಿರಿ. ಜಗ ಮೆಚ್ಚಿದರೆಷ್ಟು? ಬಿಟ್ಟರೆಷ್ಟು?

4. ಲಿಂಗಾಯತರಿಗೆ ಧರ್ಮಗುರು ಯಾರು ? ಧರ್ಮಕ್ಷೇತ್ರ ಯಾವುದು ಎಂದು ಗುರುತಿಸಿ ಕೂಡಲಸಂಗಮ, ಬಸವಕಲ್ಯಾಣಗಳೇ ಧರ್ಮಕ್ಷೇತ್ರ, ಈ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದಿರಿ. ಎಲ್ಲ ಬಸವ ತತ್ತ್ವಾನುಯಾಯಿಗಳು ಒಂದೆಡೆ ಸೇರಬೇಕೆಂಬ ತಮ್ಮ ಮಹಾಸಂಕಲ್ಪವನ್ನು ಶರಣಮೇಳ ಎಂಬ ಬೃಹತ್ ಕಾರ್ಯಕ್ರಮವನ್ನು ಕೂಡಲಸಂಗಮದಲ್ಲಿ ಪ್ರತಿವರ್ಷನಡೆಯುವಂತೆ ಮಾಡಿ ಇತಿಹಾಸ ನಿರ್ಮಿಸಿದಿರಿ. ದೇಶದ ಬೇರೆ ಬೇರೆ ರಾಜ್ಯಗಳಿಂದ ಶ್ರದ್ಧೆ ಭಕ್ತಿಯಿಂದ ಕೂಡಲಸಂಗಮದಲ್ಲಿ 3–4 ಲಕ್ಷ ಜನ ಸೇರುವಂತೆ ಮಾಡಿದ್ದು ಪವಾಡ ಸದೃಶವಾದದ್ದು.

5. ಲಿಂಗಪೂಜೆಯ ವಿಧಾನವನ್ನು ಜನ ಚನ್ನಾಗಿ ಅರಿತುಕೊಳ್ಳಲಿ, ಒಂದೆಡೆ ಸೇರಲಿ ಎಂದು, ಸಾಮೂಹಿಕ ಇಷ್ಟಲಿಂಗಪೂಜೆಯನ್ನು ಜಾರಿಗೆ ತಂದಿರಿ. ಆವಾಗಲೂ ಅನೇಕ ಮಠಾಧೀಶರು ವಿರೋಧಿಸಿದರು. ಬಹಿರಂಗದಲ್ಲಿ ವೇದಿಕೆಯ ಮೇಲೆ ಪೂಜೆ ಮಾಡಿಸುವುದು ತಪ್ಪು ಎಂದವರು ಈಗ ತಾವೂ ಒಪ್ಪಿ ಅದನ್ನೇ ಮಾಡುತ್ತಿದ್ದಾರೆ. ಮಾತಾಜಿ ತಾವಿಟ್ಟ ಹೆಜ್ಜೆ ಆನೆ ನಡೆದ ದಾರಿ. ಎಲ್ಲರೂ ಆ ದಾರಿಯಲ್ಲಿ ಹೋಗುವರು.

6. ಅಪ್ಪಾಜಿಯವರ ಸಮ್ಮುಖದಲ್ಲಿ ಪ್ರಾರಂಭವಾದ ರಾಷ್ಟ್ರೀಯ ಬಸವ ದಳಗಳು ಗಣಾಚಾರದಳ ಎಲ್ಲೆಡೆ ನಿರ್ಮಾಣಗೊಳ್ಳುವಂತೆ ಮಾಡಿ ಸಂಘಟನಾ ಚಾತುರ್ಯ ಮೆರೆದಿರಿ. ಈ ಸಂಘಟನೆಯೆ ಶರಣಮೇಳದಲ್ಲಿ ಲಕ್ಷಾಂತರ ಜನ ಸೇರಲು ಕಾರಣವಾಯಿತು. ಸಂಘಟನೆಯಿಂದ ಮಹಾಚೈತ್ರ, ಚಿಕ್ಕವೀರರಾಜೇಂದ್ರ ದೂರದರ್ಶನ ಧಾರಾವಾಹಿ, ಆನು ದೇವಾ ಹೊರಗಣವನು ಪುಸ್ತಕಗಳನ್ನು ಮುಟ್ಟುಗೋಲು ಹಾಕಿಸುವಲ್ಲಿ ಜಯ ಕಂಡಿರಿ. ಗೋಹತ್ಯ ನಿಷೇಧಕ್ಕೆ ಇತರ ಸಂಘಟನೆಗಳೊಂದಿಗೆ ಹೋರಾಟಕ್ಕೆ ಬೀದಿಗೆ ಇಳಿಯಲು ಶರಣರಿಗೆ ಮಾರ್ಗದರ್ಶನ ಮಾಡಿದಿರಿ. ಸರಕಾರಿ ಶಾಲಾ ಮಕ್ಕಳಿಗೆ ಮೊಟ್ಟೆ ಬೇಡ, ಹಾಲು ಹಣ್ಣು ಕೊಡಿ ಎಂದು ಪ್ರತಿಭಟನೆ ಮಾಡಲು ತಾವೂ ಭಾಗವಹಿಸಿ ಯಶಸ್ಸು ಕಂಡಿರಿ.

7. ಬಸವ ಪೀಠವು ಎದ್ದು, ಒಸೆದು ನಾಣ್ಯವು ಹುಟ್ಟಿ  
ಬಸವನ ಮುದ್ರೆ ಮೆರೆದಾವು । ಧರೆಯವಗೆ  
ವಶವಾಗದಿಹುದೆ ಸರ್ವಜ್ಞ ?

ಎಂಬ ವಾಣಿಯಂತೆ ಬಸವ ಧರ್ಮ ಪೀಠವನ್ನು ನಮ್ಮ ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 1992ರಂದು ಸ್ಥಾಪಿಸಿ, ಪೂಜ್ಯ ಲಿಂಗಾನಂದ ಸ್ವಾಮಿಗಳನ್ನು ಪ್ರಥಮ ಪೀಠಾಧಿಕಾರಿಯನ್ನಾಗಿ ಮಾಡಿ ಗುರು ಋಣ ತೀರಿಸಿದಿರಿ. 12ನೇ ಶತಮಾನದಲ್ಲಿ ಬಸವ ಕಲ್ಯಾಣದಲ್ಲಿ ನಡೆದ ಐತಿಹಾಸಿಕ ಕ್ರಾಂತಿಯಲ್ಲಿ ಶರಣರು/ ನೊಂದು ಚದುರಿ ಅಲ್ಲಲ್ಲಿ ಹೋಗಿದ್ದು ಹೃದಯ ಕಲಕುವ ವಿಷಯ. ಆ ಚದುರಿ ಹೋದ ಶರಣರನ್ನು ಮತ್ತೆ ಒಂದುಗೂಡಿಸಲು ಬಸವಕಲ್ಯಾಣದಲ್ಲಿ, ಕಾಯಕ ದಿನದಂದು ಕಲ್ಯಾಣಪರ್ವ ಎಂಬ 3 ದಿನಗಳ ಹಬ್ಬವನ್ನು 2002ರಲ್ಲಿ.ಪ್ರಾರಂಭ ಮಾಡಿದಿರಿ. ಇಲ್ಲಿ ಕೂಡ ಶರಣಮೇಳದಂತೆ ಪ್ರತಿವರ್ಷ ಲಕ್ಷಾಂತರ ಶರಣರು ಸೇರುವಂತೆ ಮಾಡಿದ್ದು ಅದ್ಭುತ ಸತ್ಯ. ಕಲ್ಯಾಣಪರ್ವದಲ್ಲಿ 770 ಅಮರಗಣಂಗಳ ನಾಮಸ್ಮರಣೆ ಮಾಡಿಸುವಿರಿ. ಶೂನ್ಯಪೀಠಾಧೀಶ ಅಲ್ಲಮಪ್ರಭು ಪೀಠ ಸ್ಥಾಪಿಸಿ, ಬಸವ ಪರಂಪರೆಯನ್ನು ಮುಂದುವರಿಸಿದಿರಿ.





8. ರಾಜ್ಯದ ಪ್ರತಿ ಊರುಗಳಲ್ಲಿ ಬಸವ ಮಂಟಪಗಳು ನಿರ್ಮಾಣಗೊಳ್ಳುವಂತೆ ಮಾಡಿದಿರಲ್ಲದೆ ಹೊರರಾಜ್ಯಗಳಲ್ಲಿಯೂ ಅನೇಕ ಊರುಗಳಲ್ಲಿ ಬಸವ ಮಂಟಪಗಳ ನಿರ್ಮಾಣಗೊಳ್ಳುವ ನಿಟ್ಟಿನಲ್ಲಿ ಪ್ರೇರಣೆ ನೀಡುತ್ತಿರುವಿರಿ. ಇದರಿಂದಾಗಿ ಸಮಾಜ ಬಾಂಧವರು ಒಂದೆಡೆ ಸೇರಿ ಪೂಜೆ ಪ್ರಾರ್ಥನೆ, ಪ್ರವಚನಗಳಲ್ಲಿ ಭಾಗಿಯಾಗಿ ಬಸವ ಪ್ರಭೆಯಲ್ಲಿ ಬಾಳ ಸಾಫಲ್ಯತೆ ಪಡೆದುಕೊಳ್ಳಲು ಅನುವು ಮಾಡಿಕೊಟ್ಟರಿ.

9. ಏಕದೇವೋಪಾಸನೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಹಲವು ದೇವರ ಭ್ರಾಂತಿ ಅಳಿಸಿ ಹಾಕಿದಿರಿ. ಈ ಸಾಧನೆ ಸಾಮಾನ್ಯವಲ್ಲ ಯಾರೂ ಮಾಡದ ಸಾಧನೆ ಮಾಡಲು ಮಾತಾಜಿ ನಿಮಗೆ ಮಾತ್ರ ಸಾಧ್ಯ. ವಚನ ಸಾಹಿತ್ಯದ ಆಳವಾದ ಅಧ್ಯಯನದಿಂದ, ನಮ್ಮ ಧರ್ಮದ ಆಚರಣೆಗಳೇನು ಎಂಬುದ ತಿಳಿಸಿ, ಲಿಂಗಾಯತ ಧರ್ಮಕ್ಕೆ ಆಚರಣೆಗಳ ಸುಂದರವಾದ ಚೌಕಟ್ಟು ಹಾಕಿದಿರಿ.

10. ಹುಟ್ಟನಿಂದ ಲಿಂಗೈಕ್ಯರಾಗುವವರೆಗಿನ ಧಾರ್ಮಿಕ ಆಚರಣೆಗಳು, ಸರಳವಾಗಿ, ಜ್ಞಾನಯುತವಾಗಿ, ಬಸವತತ್ತ್ವದ ಪ್ರಕಾರ ನಡೆಯುವಂತೆ ಜಾರಿಗೆ ತಂದಿರಲ್ಲದೇ, ಬಸವಧರ್ಮದ ಸಂಸ್ಕಾರಗಳು ಎಂಬ ಪುಸ್ತಕ ಬರೆದು, ಭಕ್ತರಿಗೆ ಕೊಟ್ಟು ಯಾರು ಬೇಕಾದವರೂ ತಿಳಿದವರು, ಅನುಸರಿಸಲು ಅನುವು ಮಾಡಿಕೊಟ್ಟರಿ. ಮಾತೃಹೃದಯಿಯಾದ ತಾವು, ಎಲ್ಲ ಜಾತಿ ಧರ್ಮದವರ ಅನಾಥ ಮಕ್ಕಳಿಗೆ, ಆಶ್ರಯ ನೀಡಿ, 5 ಅನಾಥಾಶ್ರಮ ವೃದ್ಧಾಶ್ರಮಗಳನ್ನು ನಡೆಸುತ್ತಿರುವಿರಿ.

11. ಸಮಾಜದಲ್ಲಿ ನೊಂದು ಬಂದ, ನಿರ್ಗತಿಕ ಹೆಣ್ಣುಮಕ್ಕಳಿಗೆ ಆಶ್ರಯನೀಡಿ ನೊಂದಮನಗಳಿಗೆ ನೆಮ್ಮದಿ ನೀಡುತ್ತಲಿರುವಿರಿ.

12. ಸಮಾಜದಲ್ಲಿ ಕಡೆಗಣಿಸಲ್ಪಟ್ಟ ದಲಿತ ವರ್ಗದ ಎಲ್ಲ ಮುಖಂಡರನ್ನು ಶರಣಮೇಳಕೆ ಬರಮಾಡಿಕೊಂಡು ಸಮಾನವೇದಿಕೆ ನೀಡಿ ಲಿಂಗಾಯತ ಧರ್ಮ ಜಾತ್ಯತೀತ ಧರ್ಮವೆಂದು ಸಾರಿದಿರಿ. ಬಸವತತ್ತ್ವ ಒಪ್ಪಿ, ಅಪ್ಪಿಕೊಂಡವರಿಗೆಲ್ಲ ಧರ್ಮದ ಬಾಗಿಲನ್ನು ತೆರೆದೇ ಇಟ್ಟರಿ. ಬಂದವರಿಗೆ ಧಾರ್ಮಿಕ ಹಕ್ಕನ್ನು ನೀಡಿದಿರಿ.

ಜಗದ ಇತಿಹಾಸದಲ್ಲಿ ಯಾರಿಗೂ ಯಾವ ಕಾಲಕ್ಕೂ ಹೋಲಿಸಲಾಗದ ವ್ಯಕ್ತಿ ಮಹಾ ಮಾನವತಾವಾದಿ ಸ್ತ್ರೀಕುಲೋದ್ಧಾರಕ ಗುರು ಬಸವಣ್ಣನವರ ಅಂಚೆ ಚೀಟಿ, ನಾಣ್ಯ ಆಗಲು ತಮ್ಮ ಪ್ರೇರಣೆ ದೊಡ್ಡದು. ಕಾಲಜ್ಞಾನ ವಚನ ನಿಜವಾದದ್ದು ತಮ್ಮಿಂದ ಅಲ್ಲವೆ ಮಾತಾಜಿ!

ನಾರಿ ಒಬ್ಬಳು ಬಂದು ಭಾರಿ ಅಬ್ಬರ ಹೊತ್ತು  
ಆರೂಢ ಭಿಕ್ಷೆಯ ಬೇಡ್ಯಾಳು ಸುವ್ವಿ,  
ನಮ್ಮ ವೀರ ಬಸವಣ್ಣ ಬರುವಾಗ ಸುವ್ವಿ

ಎಂಬ ಕಾಲಜ್ಞಾನ ವಚನದಂತೆ, ಭಾರಿ ಅಬ್ಬರಮಾಡಿ ಸಮಾಜವನ್ನು ಮೌಢ್ಯತೆಯಿಂದ ಎಚ್ಚರಿಸಿದಿರಿ.

(ಮುಂದುವರಿಯುವುದು.....)

## ಉಳಿವೆಯ ಶಿವಪುರದಲ್ಲಿ ಯೋಜಿಸಲಾಗಿದ್ದ ತರಬೇತಿ ಶಿಬಿರ ರದ್ದು

ಕಲ್ಯಾಣ ಕಿರಣ ಮಾಸ ಪತ್ರಿಕೆ ಮಾರ್ಚ್ ಸಂಚಿಕೆಯ 14ನೆಯ ಪುಟದಲ್ಲಿ ಉಳವಿಯ ಮಹಾಮನೆಯ ಸ್ವಚ್ಛತಾ ಕಾರ್ಯಕ್ರಮ ಮತ್ತು ಒಂದು ವಾರದ ತರಬೇತಿ ಶಿಬಿರದ ಬಗ್ಗೆ ಕೊಡಲಾಗಿತ್ತು. ಕಾರಣಾಂತರಗಳಿಂದ ಮಹಾಮನೆ ಗವಿಯ ಸ್ವಚ್ಛತಾ ಕಾರ್ಯಕ್ರಮ ಮತ್ತು ತರಬೇತಿ ಶಿಬಿರ ರದ್ದಾಗಿದೆ. ಶರಣೋತ್ಸವವು ದಿ.30–4–2012ರಂದು ಮುಕ್ತಾಯಗೊಳ್ಳುವುದು. ದಿ.1–5–2012ರಂದು ಉಳವಿಯ ಸಂದರ್ಶನ ಮಾಡಬಯಸುವವರು ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನಲ್ಲಿ ಹೋಗಿ ಬರಬಹುದು. ಸಶಕ್ತರು ಆಕಳಗವಿ, ಮಹಾಮನೆ ಗವಿಗಳನ್ನು ಸಂದರ್ಶಿಸಿ ಬರಬಹುದು.

## ವಧು ವರಾನ್ವೇಷಣೆ ವಿಭಾಗ

1. ಪ್ರತಿಭಾ. ತಂದೆ ಅಜ್ಜಣ್ಣ, ತಾಯಿ. ಸಾವಿತ್ರಮ್ಮ ಊರು ಚಳ್ಳಕೆರೆ. ಜನ್ಮ ದಿನಾಂಕ 1985. ಶಿಕ್ಷಣ : ಬಿ.ಎ, ದೂರವಾಣಿ : 08195-222775, 9481415427. ಬಸವ ತತ್ತ್ವ ವರ. ಸರಕಾರಿ ನೌಕರಿ ಅಥವಾ ಬಿಜಿನೆಸ್
2. ರವಿಚಂದ್ರ, ತಂದೆ. ಪಂಡಿತಾರಾಧ್ಯ, ತಾಯಿ.ಉಮಾದೇವಿ ಹುಲಿಕಂಠಿಮಠ ಜನ್ಮ ದಿನಾಂಕ : 26-9-1982. ಶಿಕ್ಷಣ : ಬಿ.ಕಾಂ, ಹುಬ್ಬಳ್ಳಿಯಲ್ಲಿ ಸ್ವಂತ ಮನೆ ಇದೆ. ಕೆಲಸ : 5 ವರ್ಷದಿಂದ . VRL ಕಂಪನಿಯಲ್ಲಿ ಅಕೌಂಟೆಂಟ್ ದೂರವಾಣಿ : 9740044276
   ವಧು: ಸುಂದರವಾಗಿದ್ದು ಯಾವುದಾದರೂ ಡಿಗ್ರಿ, ಬಸವ ತತ್ತ್ವದವರಿಗೆ ಆದ್ಯತೆ.
3. ಶರಣು. ತಂದೆ ಬಸವರಾಜ ಸಜ್ಜನ್, ಜನ್ಮ ದಿನಾಂಕ: 3-10-1982 ಶಿಕ್ಷಣ : SSLC. Height 5'.5". ಕೆಲಸ : ವ್ಯವಸಾಯ ಮತ್ತು ಕಿರಾಣಿ ಅಂಗಡಿ. ದೂರವಾಣಿ : 08472-213370, 9740260799, 9945721479
4. ಅಶೋಕ ಆರ್.ಎಸ್. ತಂದೆ : ಸುಂದರೇಶ್. ಜನ್ಮ ದಿನಾಂಕ: 21-6-1983 ಶಿಕ್ಷಣ : I.T.I. Height 5'.2". Work : Sales Executive. Bangalore Vijayanagar, Mob : 9886564190
5. ವಾಯ್.ಬಿ. ಶ್ರೀಕಾಂತ್ ತಂದೆ : ಬಸವರಾಜಪ್ಪ, ಜನ್ಮ ದಿನಾಂಕ: 9-1-1983 ಶಿಕ್ಷಣ : M.A. M.Phil. PG Dip. Work : Asst. Curator in High Court, Bangalore Mob : 9448971997. ವಧು : Any Degree. ಬಸವ ತತ್ತ್ವದವರಿಗೆ ಆದ್ಯತೆ.
6. ಬಸವಶ್ರೀ (ಮಂಜುಳ). ತಂದೆ : ಬಸಣ್ಣ ಸೋಮನಾಳ. ಜನ್ಮ ದಿನಾಂಕ: 3-10-1986 ಶಿಕ್ಷಣ : B.Com. NTC. Height 5'.2". Work : Computer work in Gangavathi. Fair Colour. (Mob : 9986743426 ಅಣ್ಣ ಬಸವರಾಜ್)
   ವರ. ಸರಕಾರಿ ನೌಕರಿ ಅಥವಾ ಬಿಜಿನೆಸ್. ಬಸವ ತತ್ತ್ವದವರಿಗೆ ಆದ್ಯತೆ.
7. ಶ್ವೇತಾ ಪ್ರಕಾಶ ಕಂಬಾರ, ಯಮಕನಮರಡಿ. ತಾ-ಹುಕ್ಕೇರಿ. ಜಿ-ಬೆಳಗಾಂ. ಜನ್ಮ ದಿನಾಂಕ: 31-7-1991, ಶಿಕ್ಷಣ : B.Ed. Height 5'.2". Fair Colour. Mob : 9632551167, 9449915937 ವರ. ಸರಕಾರಿ ನೌಕರಿ ಅಥವಾ ಇಂಜಿನಿಯರ್.
8. ಶ್ರೀದೇವಿ ಕಲ್ಲೂರ, ತಾಯಿ-ಕುಸುಮಾ ಕಲ್ಲೂರ. ತಂದೆ-ಕರಿಬಸವನಗೌಡ ಊರು : ಬಳ್ಳಾರಿ. Work : Software Engineer in Intel Company, Bangalore. ಜನ್ಮ ದಿನಾಂಕ: 12-4-1981, Height 5'.6". Mob : 9845321910
9. ವಿನಾಯಕ ಕಲ್ಲೂರ, ತಾಯಿ-ಕುಸುಮಾ ಕಲ್ಲೂರ. ತಂದೆ-ಕರಿಬಸವನಗೌಡ ಊರು : ಬಳ್ಳಾರಿ. Education : MBA, Hospet. Work : Penna Cements, Hospet. ಜನ್ಮ ದಿನಾಂಕ: 5-1-79 ಶಿಕ್ಷಣ : Mob : 9845321910.
10. ಜಿ. ಶೈಲಜಾ. Height 5'.4". Fair Colour. ಶಿಕ್ಷಣ : MBBS. KIMS DOMB. ತಂದೆ-ಡಿ.ಬಿ.ವಿರುಪಾಕ್ಷಗೌಡ, ಶಿಕ್ಷಕರು. ಊರು : ಹುಬ್ಬಳ್ಳಿ ಜನ್ಮ ದಿನಾಂಕ: 8-3-1986,. Mob : 9740563005 / 9482992789 ವರ. MBBS. MD

ವಧು-ವರರ ವಿವರಗಳನ್ನು ಸತತವಾಗಿ ಮೂರು ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ವಧು-ವರಾನ್ವೇಷಿಗಳಾದವರು ಇನ್ನು ಮುಂದೆ ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ 500/-ರೂ.ಗಳ ಎಂ.ಓ/ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ ತೆಗೆದು ವಿವರಗಳೊಡನೆ ಕಳಿಸಬೇಕಾಗಿ ಕೋರಿಕೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
ಶರಣ. ಚಂದ್ರಮೌಳಿ ಎಮ್ಮಿಗನೂರು, ದೂ. 9448466805




[illegible] ಬಸವನಗೌಡ ಪಾಟೀಲ, ಯತ್ನಾಳ ಮಾಜಿ ಕೇಂದ್ರ ಸಚಿವರು ಅವರಿಂದ ಪೂಜ್ಯ ಮಾತಾಜಿಯವರ [illegible]7ನೆಯ ವರ್ಧಂತಿ ಉದ್ಘಾಟನೆ. ಎಡದಿಂದ ಬಲಕ್ಕೆ ವಿರೂಪಾಕ್ಷಪ್ಪ ಮೈಸೂರು, ಹೆಚ್.ಆರ್. ಕೃಷ್ಣಪ್ಪ, ದೇವಿಕಾ, ಇ.ಕೃಷ್ಣಪ್ಪ, ಬಸವಕುಮಾರ್ ಪಾಟೀಲ್, ಬಸವ ಕುಮಾರ ಸ್ವಾಮಿಗಳು.



ಸಚಿವ ಸುರೇಶ್ ಕುಮಾರ್ ಅವರಿಂದ ಪೂಜ್ಯ ಮಾತಾಜಿಯವರಿಗೆ ಹುಟ್ಟುಹಬ್ಬದ ನಿಮಿತ್ತ ರುದ್ರಾಕ್ಷಿ ಮಾಲೆ ಮತ್ತು ಫಲಪುಷ್ಪಾರ್ಪಣೆ.

CPMG/KA/BGW/50/2012-2014, RNI 19980/70, POSTED AT MBC BANGALORE GPO ON 3,10,20 OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)